Asian Research Association

INDIAN JOURNAL OF
MULTILINGUAL RESEARCH AND DEVELOPMENT



# Crises of Dalit Women in India

## ಭಾರತದಲ್ಲಿ ದಲಿತ ಮಹಿಳೆಯರ ಬಿಕ್ಕಟ್ಟು

**Chendappa Rajappa Kambar** [a,*] **Varun Gulati** [a]

[a] Department of Social Justice and Empowerment, Dr. Ambedkar International Centre, DAIC, 15, Janpath, New Delhi, India
*Corresponding author Email: crkpdf@gmail.com
DOI: https://doi.org/10.34256/ijmrd2132
Received: 12-07-2021; Revised: 20-07-2021; Accepted: 20-07-2021; Published: 21-07-2021

**Abstract:** In Sanskrit, "Yatra naryastu pujyante ramante tatra Devata' means that wherever a woman is worshipped, gods rejoice. This sholka represents the importance of women, and one can say, "Home is the first school, Mother is the first teacher," demonstrating the respect and value given to women. However, these words exist only in the form of letters and not in practise. It is a great tragedy that man is hesitant to use and accept her gratitude. When this is the case, discrimination is quite common in Dalit communities even today, and the Manuvadi attitude of discrimination against Dalit women is growing like anything else. There could be several reasons for this context. But you can always imagine upper-class communities viewing her as an object of prejudice, abusing her caste, discriminating against her caste, mischief, and reduction. This article attempted to review the social conflicts of Dalit women in India, with a focus on the unpleasant events of the time, such as raping, ignoring, disrespecting, intimidating, and so on.

**Keywords:** Dalit, Conflict of Women, Rights of Women, Challenges of women.

**Subject Specialization:** Kannada

## About the Author



**Dr. Chendappa Rajappa Kambar**, currently working as a Post-Doctoral Fellow at Dr. Ambedkar International Centre, New Delhi. He holds MA, MSW, M.Phil, and Ph.d. in the field of Social Work. His research interest includes Social Problems and Prospects and Subaltern Sections of the Indian Society. Author Published More than 20 Research Articles in reputed Journals and authored Eight Books, presented and conducted Seminars, Workshops, Conferences at National, International Platforms. He is also a faculty at the Department of Social Work, Sri Vijayanagar Sri Krishnadevaray University Ballary, P.G.Centre, Koppal and Govt Degree College, Yadagiri.

## ಪರಿಚಯ

"ಯತ್ರ ನಾರೇಸ್ತು ಪೂಜಂತೇ ತತ್ರ ದೇವತಾ ರಮಂತೆ" ಎಲ್ಲಿ ಮಹಿಳೆ ಪೂಜಿಸಲ್ಪಡುವಳೊ ಅಲ್ಲಿ ದೇವತೆಗಳು ನೆಲೆಸುತ್ತವೆ ಎನ್ನುವುದು ಸರ್ವಕಾಲಿಕ ಸತ್ಯವಾದ ವಾಣಿ. ಈ ಪ್ರಸಿದ್ಧವಾಣಿ ಮಹಿಳೆಯ ಪ್ರಾಮುಖ್ಯತೆಯನ್ನು ಸಾರಿದರೆ, ಮನೆಯೇ ಮೊದಲ ಪಾಠ ಶಾಲೆ, ತಾಯಿಯೇ ಮೊದಲ ಗುರು ಎನ್ನುವ ಗುರುವಾಣಿ 'ತಾಯಿ'ಗೆ ನೀಡುತ್ತಿರುವ ಗೌರವ ಮತ್ತು ಮೌಲ್ಯಯುತವಾದ ಮಾತುಗಳು ಆಗಿವೆ. ಆದರೆ ಪ್ರಸ್ತುತ ದಿನಗಳಲ್ಲಿ ಈ ಮಾತುಗಳು ಮತ್ತು ವಾಣಿಗಳು ಕೇವಲ ಅಕ್ಷರ ರೂಪದಲ್ಲಿ ಮತ್ತು ಆಡುವ ಮಾತಿನಲ್ಲಿ ರಾರಾಜಿಸುತ್ತಿವೆ. ಆದರೆ ಬಳಸುವ ಮತ್ತು ನಿತ್ಯರೂಢಿಯಲ್ಲಿ ಅಳವಡಿಸಿಕೊಳ್ಳುವಲ್ಲಿ ಮಾತ್ರ ಪುರುಷ ಹಿಂದೇಟು ಹಾಕುತ್ತಿರುವುದು ದೊಡ್ಡ ದುರಂತವೇ ಸರಿ. ಇಂತಹ ಸಂದರ್ಭದಲ್ಲಿ ಈ ನಿರ್ಲಕ್ಷಿತ ದಲಿತ

ಸಮುದಾಯಗಳ ಮಹಿಳೆಯರಿಗೆ ಸಹಜವಾಗಿ ಈ ರೀತಿಯ ಅಸಮಾನತೆ, ನಿರ್ಲಕ್ಷತೆಯ ತೊಂದರೆಗಳು ಕಾಡುತ್ತಿವೆ. ಇದರೊಟ್ಟಿಗೆ ಮಹಿಳೆ ಅದರಲ್ಲಿ ದಲಿತ ಮಹಿಳೆ ಕಡಿಮೆ ಎನ್ನುವ ಮನುವಾದಿ ಧೋರಣೆ ಪುರುಷನಲ್ಲಿ ಇಂದಿಗೂ ಹೆಮ್ಮರವಾಗಿ ಬೆಳೆದು ನಿಂತಿದೆ. ಇದಕ್ಕೆ ಕಾರಣಗಳು ಸಾಕಷ್ಟಿರಬಹುದು. ಆದರೆ ನಿತ್ಯದ ಬದುಕಿನಲ್ಲಿ ಮೇಲ್ವರ್ಗದ ಸಮುದಾಯಗಳು ದಲಿತ ಮಹಿಳೆಯನ್ನು ಕಡೆಗಾಣಿಸುವ, ದುಡಿಸಿಕೊಳ್ಳುವ ಮತ್ತು ಭೋಗದ ವಸ್ತುವನ್ನಾಗಿ ನೋಡಿಕೊಳ್ಳುತ್ತಿರುವ ಸಂದರ್ಭಗಳನ್ನು ಸನ್ನೀವೇಶಗಳನ್ನು ನಾವು ಸೂಕ್ಷ್ಮ-ಅತೀಸೂಕ್ಷ್ಮವಾಗಿ ಗ್ರಹಿಸಬಹುದು. ಇಂಥ ದಲಿತ ಮಹಿಳೆಯರನ್ನು ಕುರಿತಾಗಿ ಅವಳನ್ನು ದುಡಿಸಿಕೊಳ್ಳುವ, ಕಡೆಗಾಣಿಸುವ, ನಿರ್ಲಕ್ಷಿಸುವ, ಅಸಮಾನತೆಯ ದೃಷ್ಟಿಯಲ್ಲಿ ಅವಳನ್ನು ಕೀಳಾಗಿ ಕಾಣುವ, ಜಾತಿನಿಂಧನೆ ಮಾಡುವ, ಜಾತಿ ತಾರತಮ್ಯಗೊಳಿಸುವ ಮತ್ತು ಶೋಷಣೆ ಮಾಡುವಂತಹ ಅಹಿತಕರ ಘಟನೆಗಳನ್ನು ಮತ್ತು ಈ ಸಮಾಜಕ್ಕೆ ಅಂಟಿಕೊಂಡಿರುವ ಅನಿಷ್ಟ ಪದ್ಧತಿಗಳನ್ನು ಕೇಂದ್ರೀಕರಿಸಿ ಭಾರತದಲ್ಲಿನ ದಲಿತ ಮಹಿಳೆ ಅನುಭವಿಸುತ್ತಿರುವ ಮತ್ತು ಸಾಮಾಜಿಕ ಸಂಘರ್ಷಕ್ಕೊಳಪಡುತ್ತಿರುವ ಸಂಗತಿಗಳನ್ನು ಈ ಲೇಖನದಲ್ಲಿ ಅವಲೋಕಿಸಲು ಪ್ರಯತ್ನಿಸಿದೆ.

ಭಾರತವು ೧೩೯ ಕೋಟಿ ಜನಸಂಖ್ಯೆಯನ್ನು ಹೊಂದಿದ ವಿಶ್ವದ ಎರಡನೆಯ ರಾಷ್ಟ್ರ ೬೫೦೦೦೦ ಹಳ್ಳಿಗಳನ್ನು ಹೊಂದಿರುವ, ೧೯೫೦೦ ಮಾತೃಭಾಷೆಗಳನ್ನು ಆಡುವ ಏಕೈಕ ದೇಶ. ಶೇಕಡ ೬೦ರಷ್ಟು ದುಡಿಯುವ ವರ್ಗ, ಶೇಕಡ ೨೫ರಷ್ಟು ದಲಿತ ವರ್ಗ, ಶೇಕಡ ೫೦ರಷ್ಟು ಮಹಿಳೆಯರನ್ನು ಒಳಗೊಂಡು, ಸುಮಾರು ೪೬೩೫ ಜಾತಿ, ಉಪಜಾತಿಗಳನ್ನು ಹೊಂದಿರುವ ಜಗತ್ತಿನಲ್ಲಿ ಅತಿದೊಡ್ಡ ರಾಷ್ಟ್ರ ಭಾರತ.[೧](ನ್ಯಾ.ನಾಗಮೋಹನದಾಸ್, ೨೦೨೧) ಆದರೆ ಭಾರತೀಯ ಸಮಾಜದಲ್ಲಿ ಮೌಢ್ಯಗಳು, ತಾರತಮ್ಯಗಳು, ನಿಂಧನೆಗಳು, ಶೋಷಣೆಗಳು, ದೌರ್ಜನ್ಯಗಳು, ಹಿಂಸೆಗಳು, ಕಿರುಕುಳಗಳು, ಅಸ್ಪೃಶ್ಯಾಚರಣೆ ಇತ್ಯಾದಿಗಳು ನಿರಂತರವಾಗಿ ಒಂದರ ಮೇಲೊಂದು ಒತ್ತಾಯ ಪೂರ್ವಕವಾಗಿ ಸಮಾಜದಲ್ಲಿ ಪರಾಂಪರಗತವಾಗಿ ಹೇರುತ್ತಲೇ, ಶೋಷಣೆ ಮಾಡುತ್ತಲೇ ಬಂದಿವೆ. ಮತ್ತು ಇಂದಿಗೂ ಅವುಗಳು ಮುಂದುವರೆಯುತ್ತಲೇ ಸಾಗಿವೆ. ನಾವೆಲ್ಲರು ಇಲ್ಲಿ ಗಮನಿಸಬೇಕಾದ ಬಹು ಮುಖ್ಯವಾದ ಸಂಗತಿ ಎಂದರೇ ಮೇಲ್ಜಾತಿಗಳು ಮೇಲ್ವರ್ಗಗಳು, ಕೇಳಜಾತಿಗಳು ಕೆಳವರ್ಗಗಳಾಗಿ ಜಾತಿ ಆಧಾರಿತ ಕಸಬುಗಳನ್ನು ಪಾರಂಪಾರಿಕವಾಗಿ ಮಾಡಿದ್ದರ ಪರಿಣಾಮವಾಗಿ ಮೇಲು-ಕೀಳು, ಶ್ರೇಷ್ಟರು-ಕನಿಷ್ಟರು ಎಂಬ ತಾರತಮ್ಯ ಹುಟ್ಟಿಕೊಂಡು ಹೆಮ್ಮರವಾಗಿ ಬೆಳದಿದೆ.[೨](ನ್ಯಾ.ನಾಗಮೋಹನದಾಸ್, ೨೦೨೧) ಅದರೊಂದಿಗೆ ಸಾಕಷ್ಟು ಸಾಮಾಜಿಕ ತಾರತಮ್ಯಗಳು ಸಹ ಬೆಳೆದು ನಿಂತಿವೆ. ಜೊತೆಯಲ್ಲಿ ಸಾಮಾಜಿಕ ಅಸಮಾನತೆ, ರಾಜಕೀಯ ಅಸಮಾನತೆ, ಸಾಂಸ್ಕೃತಿಕ ಅಸಮಾನತೆಗಳು ಮತ್ತು ಶೋಷಣೆಗಳಿವೆ. ಶೋಷಣೆಯಲ್ಲಿ ಮಹಿಳೆ ಶೋಷಣೆ ಅದರಲ್ಲಿ ದಲಿತ ಮಹಿಳೆ ಅತ್ಯಂತ ಶೋಷಿತಳು.

ಇದರೊಟ್ಟಿಗೆ ಪ್ರಸ್ತುತ ಭಾರತ ಅಭಿವೃದ್ಧಿ ಹೊಂದುತ್ತಿರುವ ದೇಶ; ಆಗಂದ ಮಾತ್ರಕ್ಕೆ ಇಲ್ಲಿನ ಮನುಷ್ಯ ಮನುಷ್ಯರ ನಡುವೆ ಕೀಳಾಗಿ ನಡೆದುಕೊಳ್ಳುವ ರೀತಿಯ ಕುರಿತು ಮಾತನಾಡಬಾರದು ಎಂದೇನಿಲ್ಲ. ಇಲ್ಲಿನ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಅಸಮಾನತೆಗಳು, ಶೋಷಣೆಗಳು ಆಗುತ್ತಿರುವುದು ಎಲ್ಲಾರಿಗೂ ತಿಳಿದಿರುವ ಸಂಗತಿಗಳನ್ನು ಗುರುತಿಸುವುದೊಂದೆ ಅಲ್ಲ, ಪರಿಹರಿಸಬೇಕು, ಆನಂತರದಲ್ಲಿ ಮನುಷ್ಯ ಸಮಾನತೆಗೆ, ಸರಳ ಜೀವನಕ್ಕೆ ಪ್ರಾತಿನಿಧ್ಯ ನೀಡಬೇಕು, ಯಾವ ಶೋಷಿತರು, ದಮನಿತರು, ದಲಿತರು ಯಾವುದೇ ಹಿಂಸೆ, ಕಿರುಕುಳ, ಅತ್ಯಾಚಾರ, ದೌರ್ಜನ್ಯ ಮತ್ತು ಸಂಘರ್ಷಗಳೊಂದಿಗೆ ಒದ್ದಾಡುತ್ತಿದ್ದಾರೋ ಅವರ ಧ್ವನಿಯಾಗಿ, ಬೆಳಕಾಗಿ ನಿಲ್ಲುವ ಸಂದರ್ಭ ಇಂದು ಮಹತ್ವ ಎನಿಸುತ್ತದೆ. ಈ ಮಹತ್ವಕ್ಕೆ ಪ್ರೋತ್ಸಾಹ ನೀಡದೇ ಇರುವುದರಿಂದ ದೇಶದಲ್ಲಿರುವ ಶೇಕಡ ೨೫ರಷ್ಟು ದಲಿತ ವರ್ಗ ಸಾಕಷ್ಟು ಅವಮಾನ, ಅಪಮಾನವನ್ನು ಎದುರಿಸುತ್ತಿದೆ. ಶೇಕಡ ೬೫ರಷ್ಟು ದುಡಿಯುವ ವರ್ಗ ಇನ್ನೂ ಆರ್ಥಿಕ ಚೇತನ ಕಂಡಿಲ್ಲ, ಶೇಕಡ ೫೦ರಷ್ಟು ಮಹಿಳೆಯರನ್ನು ಹೊಂದಿರುವ ಭಾರತ ಪುರುಷನಷ್ಟೇ ಸಮಾನದ ಸ್ಥಾನಮಾನ ನೀಡುವಲ್ಲಿ ಸಾಕಷ್ಟು ವಂಚನೆ ಮಾಡಿದೆ. ಸುಮಾರು ೪೬೩೫ ಜಾತಿ, ಉಪಜಾತಿಗಳಿರುವ ಭಾರತ ಅನೇಕ ಜಾತಿ ಸಂಘರ್ಷಗಳನ್ನು, ಜಾತಿ ತಾರತಮ್ಯಗಳನ್ನು ಎದುರಿಸುತ್ತಿದೆ. ಶೇಕಡ ಲ೦ರಷ್ಟು ಹಿಂದೂಗಳನ್ನು[೩](ನೀತಿ ಆಯೋಗ, ೨೦೨೧) ಹೊಂದಿರುವ ಭಾರತ ಅನೇಕ ಮೌಢ್ಯಾಚರಣೆಗಳಿಂದ ಹೊರಬರಲಾಗುತ್ತಿಲ್ಲ. ಶೇಕಡ ೨೦ರಷ್ಟು ಇತರೆ ಜಾತಿಗಳನ್ನು ಹೊಂದಿರುವ ಭಾರತ ಮನುಷ್ಯ ಮನುಷ್ಯರ ನಡುವೆ ಐಕ್ಯತೆಭಾವದಿಂದ ಒಂದಾಗಿ ಬಾಳುವಂತಹ ವಾತಾವರಣವನ್ನು ಸೃಷ್ಟಿ ಮಾಡಿಕೊಳ್ಳುವಂತೆ ಆಗುತ್ತಿಲ್ಲ. ಇಲ್ಲಿ ಜಾತಿ-ಜಾತಿಗಳ ಮಧ್ಯ ಸಾಮಾಜಿಕ ಅಸಮಾನತೆಗಳು, ಧರ್ಮ-ಧರ್ಮಗಳ ಮಧ್ಯ ಸಾಂಸ್ಕೃತಿಕ ಅಸಮಾನತೆಗಳು,

ಪ್ರಾಂತ್ಯ-ಪ್ರಾAತ್ಯಗಳ ಮಧ್ಯ ರಾಜಕೀಯ ಅಸಮಾನತೆಗಳೆಂಬ ಬಗೆ ಬಗೆಯ ಅಸಮಾನತೆಗಳು, ಬಿಕ್ಕಟ್ಟುಗಳು, ವೈಮನಸ್ಸುಗಳು, ಸಂಘರ್ಷಗಳು ಕಾಲಾನುಕಾಲದಿಂದಲೂ ಬಂದಿದ್ದರೂ ಕೂಡ ಅವುಗಳು ಇನ್ನೂ ಮುಂದುವರೆಯುತ್ತಿರುವುದು ದುರಂತವಾಗಿದೆ.

## ದಲಿತ ಎಂದರೇನು?

'ದಲಿತರು' ಯಾರು?, 'ದಲಿತ' ಎಂದರೇನು? ಎನ್ನುವ ಪದಕ್ಕೆ ಸಂಬಂಧಿಸಿಂದತೆ ಹಲವು ಪ್ರಶ್ನೆಗಳು ಮತ್ತು ತಕರಾರುಗಳು ಬಂದಿರುವುದು ನಾವು ನೋಡುತ್ತಿದ್ದೇವೆ. ಆದ್ದರಿಂದ 'ದಲಿತ' ಪದಕ್ಕೆ ಸ್ಪಷ್ಟತೆ ಕೊಡಬೇಕಾದದ್ದು ಅವಶ್ಯಕತೆ ಇದೆ. 'ದಲಿತ' ಎಂಬ ಪದವು 'ಅಸ್ಪೃಶ್ಯರು' ಎಂದು ಕರೆಯಲ್ಪಡುವವರಿಗೆ ಮತ್ತು ಸಾಂಪ್ರದಾಯಿಕ ಹಿಂದೂ ಶ್ರೇಣಿಗೆ ಹೊರತಾಗಿರುವ ಇತರರಿಗೆ ಸ್ವಯಂ ಅನ್ವಯಿಸುವ ಪರಿಕಲ್ಪನೆಯಾಗಿದೆ ಎಂದು ಅಂಬೇಡ್ಕರ್ ಅವರು ಉಲ್ಲೇಖಿಸುತ್ತಾರೆ. ೧೮೮೦ರ ದಶಕದಲ್ಲಿ 'ದಲಿತ' ಎಂಬ ಮರಾಠಿ ಪದವನ್ನು ಹಿಂದೂ ಸಮಾಜದಲ್ಲಿ ತುಳಿತಕ್ಕೊಳಗಾದ ಮತ್ತು ಮುರಿದುಬಿದ್ದ ಬಹಿಷ್ಕಾರಕ್ಕೊಳಪಟ್ಟವರಿಗೆ ಮತ್ತು ಅಸ್ಪೃಶ್ಯರಿಗೆ ಬಳಿಸಿದರು. 'ದಲಿತ' ಎಂಬ ಪದವನ್ನು ಮೊದಲ ಬಾರಿಗೆ ಸಮಾಜ ಚಿಂತಕ ಮಹಾತ್ಮ ಜೋತಿಬಾ ಪುಲೆ ಬಳಿಸಿದರು ಎಂದು ಗುರುತಿಸಲಾಗಿದೆ.[೪](ಸಾಮಾಜಿಕ ಜಾಲತಾಣ ೨೦೨೧) 'ದಲಿತ' ಎನ್ನುವುದನ್ನು ಸಂಸ್ಕೃತದಲ್ಲಿ 'ವಿಭಜಿತ', 'ವಿಭಜನೆ', 'ಮುರಿದ', 'ಚೆದುರಿದ'ವರು ಎಂದರ್ಥವಾಗಿದೆ.

ಸರಳವಾಗಿ ನೋಡುವುದಾದರೆ, ದಲಿತ ಎನ್ನುವ ಪದ ಯಾವುದೇ ಒಂದು ಜನಾಂಗವನ್ನು ಅಥವಾ ಜಾತಿಯನ್ನು ಸೂಚಿಸುವಂತದಲ್ಲ. ದಲಿತ ಎನ್ನುವುದು ಒಂದು ಆಲೋಚನಾ ಕ್ರಮ ವಿನಹಃ ಯಾವುದೇ ಜಾತಿಯು ಅಲ್ಲ. ದಲಿತ ಎನ್ನುವ ಪದದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಶೋಷಣೆಗೆ ಒಳಗಾದವರು, ಅಸ್ಪೃಶ್ಯರು, ದಮನಿತರು, ತಳವರ್ಗದವರು, ಅಲೆಮಾರಿಗಳು, ಬುಡಕಟ್ಟಿನವರು, ಹಿಂದುಳಿದವರು ಎಂದು ನೋಡುತ್ತೇವೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಯಾವುದೇ ಸಮುದಾಯದ ವ್ಯಕ್ತಿಯು, ಸರ್ಕಾರದ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗಿದ್ದವರನ್ನು ನಾವು ದಲಿತ, ದಲಿತರು ಎಂದು ಕರೆಯುಬಹುದಾಗಿದೆ.

## ದಲಿತ ಮಹಿಳೆಯ ಸಾಮಾಜಿಕ ಸಂಘರ್ಷಗಳು

ಸಾಂಪ್ರದಾಯಿಕ ಭಾರತದಲ್ಲಿ ಮಹಿಳೆಯನ್ನು ಉನ್ನತ ಸ್ಥಾನದಲ್ಲಿರಿಸಿಕೊಳ್ಳುವುದು ಸ್ವಭಾವಿಕ. ದುರಂತವೆಂದರೆ ಆಧುನಿಕ ಭಾರತದ ಸಂದರ್ಭದಲ್ಲಿ ಬಹುಸಂಖ್ಯಾತ ಉನ್ನತ ಸಮುದಾಯಗಳಲ್ಲಿರುವ ಪುರುಷ ತನ್ನ ಅವೈಜ್ಞಾನಿಕ ಆಲೋಚನ ಕ್ರಮದಿಂದಾಗಿ ಮಹಿಳೆ ತನ್ನ ಉನ್ನತ ಸ್ಥಾನಮಾನವನ್ನು ಕಳೆದುಕೊಂಡು ಅವಳು ಕೇವಲ ಪುರುಷನ ಭೋಗದ ವಸ್ತುಾಗಿದ್ದಾಳೆ ಎನ್ನುವುದಕ್ಕೆ ದೇಶದಲ್ಲಿ ಅವಳ ಮೇಲೆ ಆಗುತ್ತಿರುವ ಪ್ರತಿ ೨೬ ನಿಮಿಷಕ್ಕೆ ೧ ಮಹಿಳೆಯ ಮೇಲಿನ ಕಿರುಕುಳ, ಪ್ರತಿ ೨೪ ನಿಮಿಷಕ್ಕೆ ೧ ಮಹಿಳೆಯ ಮೇಲಿನ ಅತ್ಯಾಚಾರ, ಪ್ರತಿ ೪೩ ನಿಮಿಷಕ್ಕೆ ೧ ಮಹಿಳೆಯ ಅಪಹರಣಗಳತಹ[೫](ಮಾಳಮ್ಮ ಬಿ., ಬಳ್ಳಾರಿ ೨೦೨೧) ದೌರ್ಜನ್ಯಗಳು, ಶೋಷಣೆಗಳನ್ನು ಕಂಡಾಗ ಇದು ಬಹುಸಂಖ್ಯಾತ ಸಮುದಾಯಗಳ ಪುರುಷ ದೌರ್ಜನ್ಯ ಕೇಂದ್ರಿತ ರಾಷ್ಟ್ರವೇ ವಿನಃ ಬೇರೇನೂ ಅಲ್ಲ ಎನ್ನುವುದು ತಿಳಯುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸಮಾಜದ ಕಟ್ಟಕಡೆಯ ವರ್ಗದಲ್ಲಿರುವ ದಲಿತ ಮಹಿಳೆಯ ಸ್ಥಿತಿಯಂತು ತೀರ ಹೀನವಾದದ್ದು ಎನ್ನುವುದನ್ನು ಮರೆಯುವಂತಿಲ್ಲ. ಆ ಹಿನ್ನಲೆಯಲ್ಲಿ ಅಸುರಕ್ಷತೆಯ ಭಾವದೊಂದಿಗೆ ಜೀವಿಸುತ್ತಿರುವ ಆ ದಲಿತ ಮಹಿಳೆಯು ಸಮಾಜದೊಂದಿಗೆ ನಡೆಸುತ್ತಿರುವ ಸಾಮಾಜಿಕ ಸಂಘರ್ಷಗಳಲ್ಲಿ ಅವಳ ಮೇಲಿನ ಜಾತಿನಿಂಧನೆ, ಅಸ್ಪೃಶ್ಯಾಚರಣೆ, ಶೈಕ್ಷಣಿಕ ಶೋಷಣೆ, ಆರ್ಥಿಕ ಶೋಷಣೆ, ಧಾರ್ಮಿಕ ಶೋಷಣೆ ಇತರೆ ಸಾಮಾಜಿಕ ಸಂಘರ್ಷಗಳನ್ನು ಸೂಕ್ಷ್ಮ-ಅತೀಸೂಕ್ಷ್ಮವಾಗಿ ಅರ್ಥೈಸಿಕೊಂಡು ದಲಿತ ಮಹಿಳೆಯನ್ನು ದುಷ್ಟ ಸಮಾಜದಿಂದ ರಕ್ಷಣೆ ಮಾಡಬೇಕಾದದ್ದು ನಮ್ಮೆಲ್ಲರ ಕರ್ತವ್ಯ ಅಂದಾಗ ಮಾತ್ರ ದಲಿತ ಮಹಿಳೆ ಸಮಾಜದಲ್ಲಿ ಸರಳ ಜೀವನ ನಡೆಸಲು ಸಾಧ್ಯವಾದಿತು. ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದದ್ದು ಸುಧಾರಣೆ ಅಥವಾ ಸಮಾಜದ ಮುಖ್ಯವಾಹಿನಿಗೆ ತರುವುದರಿಂದ ಇದು ಕೇವಲ ಒಂದು ದಲಿತ ಹೆಣ್ಣಿನ ಮೇಲೇ ಕೇಂದ್ರಿತವಾದ ಕೃತ್ಯವಲ್ಲ ಬದಲಾಗಿ ಅತ್ಯಂತ ನಿಷ್ಟುರವಾಗಿ

ಮಾನವ ಮಾನವನನ್ನಾಗಿಯೇ ನೋಡದೇ ಮೂಕ ಪ್ರಾಣಿಗಿಂತಲೂ ಕಡೆಯಾಗಿ ನೋಡುವ ಅನಿಷ್ಟ ಪದ್ಧತಿಯ ವಿರುದ್ಧ, ಬ್ರಾಹ್ಮಣ್ಯದ ವಿರುದ್ಧ ಜಯ ಸಾಧಿಸದಂತೆ ವಿನಹಃ ಮತ್ತೇನು ಅಲ್ಲ.

## ಸವರ್ಣೀಯರಿಂದ ದಲಿತ ಮಹಿಳೆಯ ಜಾತಿ ನಿಂಧನೆಯೊಂದಿಗಿನ ಸಂಘರ್ಷ

ಪ್ರಸ್ತುತ ಸಂವಿಧಾನದ ಅನ್ವಯ ಸಮಾಜದ ಎಲ್ಲಾ ಜಾತಿ-ಧರ್ಮಗಳಲ್ಲಿರುವ ಎಲ್ಲರೂ ಸಮಾನರು, ಇಲ್ಲಿ ಯಾರು ಶ್ರೇಷ್ಟರು ಅಲ್ಲ, ಯಾರೂ ಕನಿಷ್ಟರು ಅಲ್ಲ. ಆದರೆ ವಾಸ್ತವಾಗಿ ಇನ್ನು ಜೀವಂತವಿದ್ದ ಮನುವಾದಿಗಳು ಹಳ್ಳಿಗಳಲ್ಲಿ ಮನುಷ್ಯರನ್ನು ಮನುಷ್ಯರಂತೆ ನೋಡದಿರುವ, ಕೀಳು ಜಾತಿಯಂದು ವರ್ಗೀಕರಿಸಲ್ಪಟ್ಟ ಮನುವಾದಿಗಳು ಅವರನ್ನು ಮನುಷ್ಯರಲ್ಲಿಯೇ ಮನುಷ್ಯರನ್ನು ತೀರ ಕ್ರೂರ ಪ್ರಾಣಿಗಳಿಗಿಂತಲೂ ಅತ್ಯಂತ ಹೀನವಾಗಿ ನಡೆಸಿಕೊಳ್ಳುವುದು ಆಧುನಿಕ ದಿನಗಳಲ್ಲಿಯೂ ಇನ್ನೂ ಮುಂದುವರೆದಿರುವುದು ದುಃಖದ ಸಂಗತಿ. ಕಸುಬಗಳ ಆಧಾರದ ಮೂಲಕ ಹುಟ್ಟಿಕೊಂಡಿರುವ ಜಾತಿಗಳಲ್ಲಿ ಯಾವ ವೃತ್ತಿಯು ಒಂದಿಷ್ಟು ಶ್ರೇಷ್ಟವೆನಿಸಿತು. ಅದು ಉನ್ನತವರ್ಗವಾದರೆ, ಯಾವ ವೃತ್ತಿ ಕನಿಷ್ಟವಾಗಿತ್ತೋ ಅದು ಕೆಳವರ್ಗವಾಗಿ ಮಾರ್ಪಟ್ಟಿತು. ಜಾತಿ/ವೃತ್ತಿ ಆಧಾರಿತವಾಗಿ ಇಂದು ಮಾನವ ಕೆಳಮಟ್ಟದ ವೃತ್ತಿಗಳಿಗೆ ಕೆಳ ಜಾತಿ ಎಂದು ಕಾಣುವ ಪ್ರಸಂಗ ಶೂಚನೀಯ. ಅದು ಎಷ್ಟರ ಮಟ್ಟಿಗೆ ಎಂದರೇ ಯಾವುದಾದರು ವೈಮನಸ್ಸು ಆಕಸ್ಮಿಕವಾಗಿ ಬಂದರೆ ಅಲ್ಲಿ ನೇರ ಜಾತಿಯ ಹೆಸರನ್ನು ಉಲ್ಲೇಖಿಸಿ ಬೈಯುವ ಮೂಲಕ ಅವಮಾನ ಮಾಡುವಷ್ಟರ ಮಟ್ಟಿಗೆ ಸಾಮಾನ್ಯವಾಗಿದೆ. ಕೆಲವೊಮ್ಮೆ ಕೀಳಾಗಿ ಕಾಣುವಂತಹದ್ದು ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಕಡೆಗಣಿಸುವಂತಹದ್ದು, ಹಬ್ಬ-ಹರಿದಿನಗಳಲ್ಲಿ ಉದ್ದೇಶಪೂರ್ವಕವಾಗಿಯೇ ತೀರ ಕೆಳ ಮಟ್ಟದಲ್ಲಿರುವ ಹೊಲಸನ್ನು ಎತ್ತಿಸುವುದು, ಸಾರ್ವಜನಿಕ ಮತ್ತು ವೈಯಕ್ತಿಕ ಶೌಚಾಲಯಗಳನ್ನು ಸುಚಿಗೊಳಿಸುವಂತೆ ಒತ್ತಡ ನೀಡುವುದು, ಮನುಷ್ಯ ಮಾಡಲು ಯೋಗ್ಯವಿಲ್ಲದ ಚರಂಡಿಗಳನ್ನು ಸುರಕ್ಷಿತ ಉಪಕರಣವಿಲ್ಲದೇ ಶುಚಿಗೊಳಿಸುವಂತೆ ಹೇಳುವುದು, ಬರಿಗೈಯಿಂದಲೇ ಚರಂಡಿ ಕೆಲಸಗಳನ್ನು ಮಾಡಿಸುವುದು; ಮಾಡಲು ಒಪ್ಪದಿದ್ದರೆ ದಬ್ಬಾಳಿಕೆಯಾಗಿ ಜಾತಿ ಹೆಸರಿನ ಮೂಲಕ ನಿಂಧಿಸಿ ಒಟ್ಟಾರೆಯಾಗಿ ಕೆಲಸ ಮಾಡಿಸುವುದು; ಇಲ್ಲವೇ ಅಧಿಕ ಕೆಲಸ ಮಾಡುವಂತೆ ಒತ್ತಡ ಹೇರುವಂತಹದ್ದು, ಮಾಡಿದ ಕೆಲಸಕ್ಕೆ ನ್ಯಾಯಯುತವಾಗಿ ಸಿಗಬೇಕಾದ ಬೆಲೆ ನೀಡದೇ ಇರುವುದು. ಜೊತೆಗೆ ಯಾವುದೇ ಒಂದು ಕೆಲಸ ಅವರಿಗೆ ಆಗುತ್ತಿದ್ದರೆ ಅಂಥ ಕೆಲಸಗಳನ್ನು ತಪ್ಪಿಸುವುದು, ಅಂದದ ಮಹಿಳೆ ಸಿಕ್ಕರೆ ಆ ಹೆಣ್ಣುಮಕ್ಕಳನ್ನು ಅನವಶ್ಯಕವಾಗಿ ಲೈಂಗಿಕವಾಗಿ ಪೀಡಿಸುವುದು; ಪ್ರತಿಭಟಿಸುತ್ತಿದ್ದರೆ ಪ್ರತಿಭಟಿಸದಂತೆ ಕುತಂತ್ರ ರೂಪಿಸುವುದು, ಕಲಹಗಳೇನಾದರು ಆಕಸ್ಮಿಕವಾಗಿ ಘಟಿಸಿದರೆ ಅದರ ಬದಲಾಗಿ ಜಾತಿಯ ಹೆಸರನ್ನು ಉಲ್ಲೇಖಿಸಿ ಅವ್ಯಚಾ ಶಬ್ದಗಳಿಂದ ನಿಂಧಿಸಿ ಸಾರ್ವಜನಿಕವಾಗಿ ಮಾನಮಾರ್ಯಾದೆ ತೆಗೆಯುವುದು, ಉದ್ದೇಶಪೂರ್ವಕವಾಗಿ ದೈಹಿಕ ಹಲ್ಲೆಗಳನ್ನು ಮಾಡುವುದು, ಜೊತೆಗೆ ಮಾನಸಿಕ ಹಿಂಸೆಗಳನ್ನು ನೀಡುವುದು, ಮಡಿಮೈಲಿಗೆ ಹೆಸರಲ್ಲಿ ದಲಿತ ಮಹಿಳೆಯನ್ನು ದೂರ ನಿಲ್ಲಿಸುವ ಮೂಲಕ ಶೋಷಣೆ ಮಾಡುವುದು, ಸಣ್ಣಪುಟ್ಟ ತಪ್ಪುಗಳನ್ನು ಮಾಡಿದರೆ ಬಹಿಷ್ಕಾರ ಹಾಕುವುದು, ಯಾವುದಾದರೂ ಆರ್ಥಿಕ ಪರಿಸ್ಥಿತಿಯಿಂದ ಹೊರಬರದಿದ್ದಾಗ ನೀವು ಮಾಡಿದ ಪಾಪದಿಂದಲೇ, ನಿಮ್ಮ ಪೂರ್ವ ಜನ್ಮದ ಪಾಪದಿಂದಲೇ ನೀವಿನ್ನು ಅಲ್ಲಿಯೇ ಇದ್ದಿರಿ! ಎಂದು ಹೇಳುವ ಮೂಲಕ ಅಪಮಾನ ಮಾಡುವುದು, ಉತ್ತಮ ಶಿಕ್ಷಣ, ಉತ್ತಮ ಜ್ಞಾನ ಪಡೆಯುತ್ತಿದ್ದರೆ ಅಸೂಯೇ ಪಡುವುದು, ಮೇಲ್ವರ್ಗದ ಹೆಣ್ಣು ಯಾವುದಾದರೂ ದಲಿತ ಪುರುಷನೊಂದಿಗೆ ಪ್ರೇಮಾಂಕುರವಾದರೇ ಉದ್ದೇಶಪೂರ್ವಕವಾಗಿಯೇ ಮರ್ಯಾದೆ ಹತ್ಯೆಗಳನ್ನು ಮಾಡಿಸುವುದು; ಸವರ್ಣೀಯ ಹುಡುಗ ಅತ್ಯಾಚಾರ ಎಸಗಿದರೆ ದಂಡದ ಹೆಸರಲ್ಲಿ ಒಂದಿಷ್ಟು ಹಣ ಕೊಟ್ಟು ಕುಟುಂಬದ ಮೇಲೇ ಒತ್ತಡ ತಂದು ಮಹಿಳೆಗೆ ಅನ್ಯಾಯ ಮಾಡುವುದು, ಮಹಿಳೆ ದುಡಿಯುವ ಸಂದರ್ಭದಲ್ಲಿ ಅವಳನ್ನು ಜೀತದ ಆಳುವಿನಂತೆ ತೀರ ನಿರ್ಲಕ್ಷವಹಿಸುವುದು, ಹೀಗೆ ದಲಿತ ಮಹಿಳೆ ತನ್ನ ಜೀವಿತದ ಪ್ರತಿ ಹಂತದಲ್ಲಿಯೂ ದೌರ್ಜನ್ಯ, ದಬ್ಬಾಳಿಕ, ಅವಮಾನ, ಶೋಷಣೆ, ನಿರ್ಲಕ್ಷ ಮುಂತಾದ ಕಷ್ಟಗಳೊಂದಿಗೆ ಸಂಘರ್ಷ ಮಾಡುತ್ತಲೇ ಜೀವನ ಕಳೆಯುವಂತಹ ಪರಿಸ್ಥಿತಿ ಮನುವಾದಿಗಳು, ಸವರ್ಣಿಯರು ಮಾಡುತ್ತಲೇ ಬಂದಿದ್ದಾರೆ. ಇವೆಲ್ಲವನ್ನು ದಲಿತ ಮಹಿಳೆ ಅನುಭವಿಸುತ್ತ ಹೊರಟಿದ್ದಾಳೆ. ಮಹಿಳೆಯರಲ್ಲಿಯೇ ಅತ್ಯಂತ ಹೀನ ಪರಿಸ್ಥಿತಿಗೆ ಸಿಲುಕಿದವಳು ಎಂದರೇ ಈ ದಲಿತ ಮಹಿಳೆಯಾಗಿದ್ದಾಳೆ.

## ದಲಿತ ಮಹಿಳೆಯ ಅಸ್ಪೃಶ್ಯಾಚಾರಣೆಯೊಂದಿಗಿನ ಸಂಘರ್ಷ

ಮನುಷ್ಯ ಮನುಷ್ಯನಲ್ಲಿಯೇ ಇನ್ನೊಂದು ಮನುಷ್ಯನನ್ನು ಅಮಾನುಷ್ಯವಾಗಿ ನೋಡುವ ಮತ್ತು ನಡೆದುಕೊಳ್ಳುವ ಪ್ರಕ್ರಿಯೇ ಅಸ್ಪೃಶ್ಯಾಚರಣೆ ಎನಿಸಿಕೊಳ್ಳುತ್ತದೆ. ಜಾತಿನಿಂಧನೆ, ಜಾತಿತಾರತಮ್ಯೆ ಪದಗಳು ಒಂದೇ ಅರ್ಥವನ್ನು ನೀಡಿದಂತೆ ಭಾಸವಾದರು; ಪರಸ್ಪರ ಭಿನ್ನವಾದವುಗಳು ಎನ್ನುವುದು ಅರಿಯಬೇಕಾಗಿದೆ. ಇಂದಿನ ಮಾನವ ಮಹಿಳೆಯನ್ನು ಕೇವಲ ಭೋಗದವಸ್ತುವನ್ನಾಗಿ ಕಾಣುತ್ತಿರುವ ಅನೇಕ ಉದಾಹರಣೆಗಳು ನಿಮ್ಮ ಮುಂದೇ ದಾಖಲಾಗಿವೆ. ಇನ್ನೊಂದು ಕಡೆ ಮಹಿಳೆಯರಲ್ಲಿಯೇ ಅತ್ಯಂತ ಕೀಳಾಗಿ ದಲಿತ ಮಹಿಳೆಯನ್ನು ನೋಡುವಂತದ್ದು ಇಂದು ಗ್ರಾಮೀಣ ಪ್ರದೇಶದಲ್ಲಿ ಅತೀ ಹೆಚ್ಚಾಗಿದೆ ಎನ್ನುವುದನ್ನು ಮರೆಯಲೇಬಾರದು. ದಲಿತ ಮಹಿಳೆಗೆ ಅತ್ಯಂತ ದುಃಖವನ್ನು ಮತ್ತು ಸಹಿಸಿಕೊಳ್ಳಲಾಗದ ಸನ್ನಿವೇಶಗಳು ಕೆಲವು ಸವರ್ಣೀಯರು ನೀಡುತ್ತ ಮುಂದುವರೆಸಿದ್ದಾರೆ. ಅವುಗಳಲ್ಲಿ ಪ್ರಮುಖವಾಗಿ ಗಮನಿಸಬೇಕಾದರೆ ಗ್ರಾಮೀಣ ಪ್ರದೇಶದಲ್ಲಿನ ದಲಿತ ಮಹಿಳೆ ಸಾರ್ವಜನಿಕ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಅಡುಗೆ ಮಾಡುವಂತಿಲ್ಲ ಎನ್ನುವುದು, ದಲಿತ ಮಹಿಳೆಗೆ ದೇವಾಲಯಗಳ ಗರ್ಭ ಗುಡಿಗಳಲ್ಲಿ ಪ್ರವೇಶ ನಿರಾಕರಣೆಯಾಗಿರುವುದು, ದಲಿತರ ಚೆಂದದ ಮಹಿಳೆಯನ್ನು ಕೇವಲ ಅತ್ಯಾಚಾರ, ಲೈಂಗಿಕ ಶೋಷಣೆ, ದೌರ್ಜನ್ಯಕ್ಕೆ ಅಣಿಗೊಳಿಸುವುದು, ತನ್ನ ಉಪಜೀವನಕ್ಕೇನಾದರು ದಲಿತ ಮಹಿಳೆ ಉದ್ಯೋಗವನ್ನು ಇಲ್ಲವೇ ಮಾರಾಟವನ್ನು ಆರಂಭಿಸಿದರೆ ಅಲ್ಲಿಗೆ ಸವರ್ಣೀಯರು ಖರಿಧಿಸಲು ಹೋಗದೆ ಇರುವುದರ ಮೂಲಕ ತಾರತಮ್ಯೆ ಮಾಡುವುದು, ದಲಿತಳು ಸವರ್ಣೀಯರ ಕೇರಿಯಲ್ಲಿ ತಲೆ ಎತ್ತಿ ನಡೆಯುವಂತಿಲ್ಲ ಮತ್ತು ಚಪ್ಪಲಿ ಧರಿಸಿದ್ದನ್ನು ಕೈಯಲ್ಲಿರಿಸಿಕೊಂಡು ನಡೆಯುವಂತಹದ್ದು, ಕೆಲಸಕಾರ್ಯಗಳಲ್ಲಿ ಸವರ್ಣೀಯರೊಂದಿಗೆ ಸರಿಸಮನಾಗಿ ಕುಳಿತು ಕೊಳ್ಳವಂತಿಲ್ಲ, ಕೆರೆಕಟ್ಟೆಗಳಲ್ಲಿ, ಭಾವಿಗಳಲ್ಲಿ ಅವಳಿಗೆ ಮುಕ್ತ ಅವಕಾಶ ನೀಡದೇ ಇರುವುದು, ಸಾರ್ವಜನಿಕ ಸಭೆಸಮಾರಂಭಗಳಲ್ಲಿ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು ಮಾನ್ಯತೆ ನೀಡದೇ ಕಡೆಗಣಿಸುವುದು, ಸಂಘ-ಸಂಸ್ಥೆಗಳಲ್ಲಿ ಪ್ರವೇಶ ನಿರಾಕರಿಸುವುದು, ಹೆಣ್ಣುಮಕ್ಕಳು ಶಾಲಾ-ಕಾಲೇಜು ಮಕ್ಕಳ ಸೌಂದರ್ಯವರ್ಧಕ ಹೆಚ್ಚಿಸಿಕೊಳ್ಳಲು ಇಚ್ಚಿಸುವವರಿಗೆ ಅವರ ಮನೆ, ಅಂಗಡಿಗಳಲ್ಲಿ ಮುಕ್ತವಾದ ಪ್ರವೇಶ ನೀಡದೇ ಇರುವುದು. ದಲಿತ ಮಹಿಳೆ ಅಡುಗೆ ಮಾಡಿದ ಊಟ ಮಾಡುವುದಿಲ್ಲ, ಜೊತೆಗೆ ಅವಳನ್ನು ಮುಟ್ಟಿಸಿಕೊಳ್ಳದೇ ಅವಳನ್ನು ತುಚ್ಚವಾಗಿ ಕಾಣುವಂತಹದ್ದು ಆದರೆ ಅವಳನ್ನು ಲೈಂಗಿಕವಾಗಿ ಬಳಸಿಕೊಳ್ಳುವುದಕ್ಕೆ ಯಾವ ಮೈಲಿಗೆ ಇಲ್ಲ. ದೇವದಾಸಿ ಹೆಸರಲ್ಲಿ ಅವಳ ಜೀವನ ಹಾಳು ಮಾಡುವುದರಲ್ಲಿನ ಅಸ್ಪೃಶ್ಯಾಚರಣೆ ಅವರಿಗೆ ಮುಖ್ಯವೆನಿಸುವುದಿಲ್ಲ. ಇದರರ್ಥ ಧರ್ಮದ ಹೆಸರಲ್ಲಿ, ಜಾತಿಯ ಹೆಸರಲ್ಲಿ ಅವರಿಗೆ ಅವಶ್ಯಕತೆಗನುಗುಣವಾಗಿ ನೀತಿ-ನಿಯಮಗಳು ಬದಲಾಯಿಸುವುದು, ಸಂಪ್ರದಾಯಗಳನ್ನು ತಿದ್ದುವುದು ಸವರ್ಣೀಯರಿಗೆ ತಪ್ಪು ಅನಿಸುವುದಿಲ್ಲ. ಇದೊಂದು ರೀತಿಯ ಆಧುನಿಕ ಅಸ್ಪೃಶ್ಯಾಚರಣೆ ಎಂದರೆ ತಪ್ಪಾದಿತು. ಇವೆಲ್ಲವನ್ನು ಎಷ್ಟು ದಿನ ಅಂಥ ದಲಿತ ಮಹಿಳೆ ಸಹಿಸಿಕೊಳ್ಳಬೇಕು. ಆ ದೇವರೆ ಬಲ್ಲ, ಇನ್ನೊಂದು ಕಡೆ ದಲಿತ ಅನಕ್ಷರಸ್ಥ ಮಹಿಳೆಯನ್ನು ಕೇವಲ ಪೌರ ಕಾರ್ಮಿಕ ಸ್ವಚ್ಚಗೊಳಿಸುವಂತಹ ಕೆಲಸಕ್ಕೆ ಮಾತ್ರ ಬಳಸಿಕೊಳ್ಳಲಾಗುತ್ತಿದೆ. ಅದು ಇಷ್ಟವಿಲ್ಲದಿದ್ದರು ಒತ್ತಾಯಪೂರ್ವಕವಾಗಿ ಕೆಲಸಮಾಡಿಸುವಂತೆ ಮಾಡುತ್ತಿರುವುದು ಮರೆಯುವಂತಿಲ್ಲ. ಈ ರೀತಿಯ ಅನೇಕ ಇಷ್ಟವಿಲ್ಲದೇ ಇರುವ ಕೆಲಸಗಳನ್ನು ಮಾಡುವಂತೆ ತೊಂದರೆ ಕೊಡುತ್ತಲೇ ಬಂದಿರುವ ಕಾರಣಕ್ಕೆ ದಲಿತ ಮಹಿಳೆ ಅಸ್ಪೃಶ್ಯಾಚರಣೆಯ ಸಂಘರ್ಷವನ್ನು ಎದುರಿಸುತ್ತಲೇ ಬಂದಿದ್ದಾಳೆ. ಆಧುನಿಕ ಈ ಸಂದರ್ಭದಲ್ಲಿ ಇನ್ನೂ ನಿಲ್ಲುತ್ತಿಲ್ಲ, ಎಂಥ ದೌರ್ಭಾಗ್ಯ. ಇದರ ವಿರುದ್ಧ ಪ್ರಗತಿಪರರು, ಚಿಂತಕರು, ಸಮಾಜದ ಕಾಳಜೀಯುಳ್ಳ ಪ್ರತಿಯೊಬ್ಬರು ಧ್ವನಿ ಎತ್ತಲೇಬೇಕು. ದಲಿತ ಮಹಿಳೆಗೆ ತೊಂದರೆ ನೀಡುವ ಶೋಷಣೆಗಳನ್ನು ತಪ್ಪಿಸಲೇಬೇಕಾಗಿದೆ.

## ದಲಿತ ಮಹಿಳೆಯ ಸಾಮಾಜಿಕ ಶೋಷಣೆಯೊಂದಿಗಿನ ಸಂಘರ್ಷ

ಮಾನವ ಸಂಘಜೀವಿ ಅವನು ಒಬ್ಬಂಟಿಯಾಗಿ ಬದುಕಲಾರ ಎನ್ನುವ ಅರಿಸ್ಟಾಟಲ್ ಅವರ ಮಾತು ಸರ್ವಕಾಲಿಕ ಸತ್ಯವಾದದ್ದು. ಅದೇ ಪ್ರಕಾರವಾಗಿ ಮಹಿಳೆ ಅದರಲ್ಲಿ ದಲಿತ ಮಹಿಳೆ ಯಾವಾಗಲೂ ಸಮಸ್ಯೆಗಳೊಂದಿಗೆ ಬಾಳುವ ಜೀವ. ಅವಳ ಸಮಸ್ಯೆಗಳು ಮತ್ತು ಸಂಘರ್ಷಗಳಿAದ ಮುಕ್ತಿ ಹೊಂದಲಾರಳು ಎನ್ನುವ ಮಾತು ಆಧುನಿಕ ಕಾಲದಲ್ಲಿಯು ಅವಳು ಹೋರಾಡುತ್ತಿರುವ ರೀತಿ, ಎದುರಿಸುತ್ತಿರುವ ಸಂಘರ್ಷಗಳನ್ನು ಸೂಕ್ಷ್ಮವಾಗಿ ನೋಡಿದಾಗ ತಿಳಿಯುವಂತಹದ್ದು. ಆ ಹಿನ್ನಲೆಯಲ್ಲಿ ದಲಿತ ಮಹಿಳೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಮಾತ್ರ ಅಲ್ಲ ಬುಡಕಟ್ಟು ಪ್ರದೇಶಗಳಲ್ಲಿಯು ಅವಳಿಗೆ

ಸಾಕಷ್ಟು ಸಾಮಾಜಿಕ ಸಮಸ್ಯೆಗಳು ಅಂಟಿಕೊಳ್ಳುತ್ತಲೇ ಇವೆ ಎನ್ನುವುದು ಬಹು ಮುಖ್ಯವಾಗಿ ಗಮನಿಸಬೇಕು. ಪ್ರಸ್ತುತ ಸಂದರ್ಭದಲ್ಲಿ ಅವಳ ಸಾಮಾಜಿಕ ಬದುಕು ಸಂಘರ್ಷದಿಂದ ಕೂಡಿದ್ದಾಗಿದೆ ಎನ್ನುವುದು ತೀರ ನೋವಿನ ಸಂಗತಿ. ಏಕೆಂದರೆ ನಿತ್ಯ ಅವಳು, ಒಪ್ಪಿತವಲ್ಲದ, ಸಹಮತವಿಲ್ಲದ ದೌರ್ಜನ್ಯಗಳು ಅವಳನ್ನು ನಾಶಗೊಳಿಸುತ್ತಿವೆ. ದಲಿತಳು, ದಲಿತ ಹೆಣ್ಣುಮಗಳು ಎನ್ನುವ ಒಂದೇ ಕಾರಣದಿಂದ ಅವಳ ಮೇಲೆ ಸರ್ವಣೀಯರು ರಾಕ್ಷಸ ರೂಪತೋರಿಸುತ್ತಿರುವ ಮತಿಭ್ರಮಣಿಯರು, ವಿಕೃತ ಮನಸ್ಸುಗಳು ಸಮಾಜದಲ್ಲಿ ಅವಳನ್ನು ಮುಖ ಎತ್ತಿ ತೋರಿಸದಂತೆ ಮಾಡುತ್ತಿರುವುದು ಇತ್ತೀಚೆಗೆ ಹೆಚ್ಚಾಗಿದೆ. ಕೆಲವೊಮ್ಮೆ ದಲಿತ ಮಹಿಳೆಯನ್ನು ಬಳಸಿಕೊಂಡು ಅವಳಿಂದಲೇ ಅಪರಾಧ ಕೃತ್ಯಗಳನ್ನು ಮಾಡಿಸುವುದು ಒಂದು ರೀತಿಯ ಶೋಷಣೆಗೆ ಅವಕಾಶ ಮಾಡಿದಂತೆ ಆಗಿದೆ. ದಲಿತ ಮಹಿಳೆ ಬಳಷ್ಟು ಕಡು ಬಡತನ, ಬಡತನದ ಪರಿಸ್ಥಿತಿಯಲ್ಲಿ ಸಂಸಾರ ಸಾಗಿಸುವ ಸಂದರ್ಭ ಬಳಸಿಕೊಂಡು ಸಮಾಜಘಾತಕರು ಅಂತಹ ಕೃತ್ಯಗಳಲ್ಲಿ ಬಳಸಿಕೊಳ್ಳುತ್ತಿದ್ದಾರೆ ಎನ್ನುವುದು ದುರಂತ.

ಯಾವ ಯಾವ ಸಂದರ್ಭಗಳಲ್ಲಿ ಸಾಮಾಜಿಕವಾಗಿ ಸಂಘರ್ಷಣೆಗೆ ಒಳಗಾಗುತ್ತಿದ್ದಾಳೆಂದು ಒಮ್ಮೆ ಕಣ್ಣಾಡಿಸಿದರೆ ಸಮಾಜದಲ್ಲಿ ದಲಿತ ಮಹಿಳೆ ಇತರ ಮೇಲ್ವರ್ಗದ ಮಹಿಳೆಯರಂತೆ ಏನಾದರೂ ಹೊಸ ಹೊಸ ವಿನ್ಯಾಸದ ಹೊಸ ಬಟ್ಟೆಗಳನ್ನು ಧರಿಸಿದರೆ ಸಹಿಸಕೊಳ್ಳದೇ ಕೊಂಕು ನುಡಿಗಳಿಂದ ಅವಮಾನ, ಅಪಮಾನ ಅವಳಿಗೆ ತಪ್ಪಿದ್ದಲ್ಲ ಅನ್ನುವಂತಾಗಿದೆ. ಸೌಂದರ್ಯ ಆರಾಧಕ ಮಹಿಳೆರನ್ನು ಕಂಡರೆ ಇವರಿಗೆ ಇರಿಸು-ಮುರಿಸು, ಇನ್ನು ಅಂದ-ಚೆಂದದ ದಲಿತ ಮಹಿಳೆ ಕಂಡರೆ ಹೇಗಾದರೂ ಮಾಡಿ ಸರಿ ಅವಳನ್ನು ಉಪಪತ್ನಿಯನ್ನಾಗಿ, ಇಲ್ಲವೇ ಭೋಗಕ್ಕೆ ಬೇಕಾಗುವ ಹೆಣ್ಣೊಂದು ಭಾವಿಸಿ; ಆ ನಿಟ್ಟಿನಲ್ಲಿ ಅವಳನ್ನು ಮಾನಸಿಕ ಹಿಂಸೆ ನೀಡಲು ಮುಂದಾಗುತ್ತಾರೆ ಎನ್ನುವುದು ನಾಚಿಕೆಗೇಡು. ದಲಿತ ಮಹಿಳೆಯರು ಹೆಚ್ಚು ಹೆಚ್ಚು ಶ್ರಮಿಕರು, ಕೃಷಿಕೂಲಿಕಾರರು ಎನ್ನುವುದು ಎಲ್ಲರಿಗೂ ತಿಳಿದಿದೆ. ಇಂತ ಕೆಲಸ ಮಾಡುವ ಸಂದರ್ಭಗಳಲ್ಲಿ ಅವಳನ್ನು ದೈಹಿಕವಾಗಿ ಅವಳನ್ನು ಬಳಸಿಕೊಳ್ಳುವ ಸಂಬಂಧವನ್ನು ಇರಿಸಿಕೊಳ್ಳುವುದು ಆ ಮೂಲಕ ಅವಳ ಸಂಸಾರವನ್ನೇ ನೆಮ್ಮದಿಯಿಂದ ಇರಲು ಬಿಡದೇ ಹಾಳು ಮಾಡುವುದು ಇನ್ನೊಂದು ಬಗೆಯ ಶೋಷಣೆಯಾಗಿದೆ. ಇದರಾಚೆಗೆ ದಲಿತ ಮಹಿಳೆ ಒಂದು ವೇಳೆ ಅಲ್ಪ-ಸ್ವಲ್ಪ ಅಕ್ಷರ ಕಲಿತು ವಿದ್ಯಾವಂತರಾಗಿ ತಮ್ಮ ಸಮುದಾಯಗಳ ಅಭಿವೃದ್ಧಿಗಾಗಿಯೋ ಅಥವಾ ಮತ್ತ್ಯಾವ ಉದ್ದೇಶಕ್ಕೋ ರಾಜಕೀಯ ಪ್ರವೇಶ ಮಾಡಿದರೇ ಅಲ್ಲಿಯೂ ಅವಳಿಗೆ ಸವರ್ಣೀಯರು ಸರಿಯಾಗಿ ಸರಿಯಾದ ಯೋಜನೆಗಳಿಗೆ ಸಹಾಯ ಸಹಕಾರ ಕೊಡುವುದಿಲ್ಲ. ಆ ಬಗೆಯಲ್ಲಿಯೂ ಒಂದು ರೀತಿಯ ಶೋಷಣೆ, ಆಕಸ್ಮಾತ್ ಪ್ರತಿಭಾನ್ವಿತ ದಲಿತ ಮಹಿಳೆ ಕೆಲಸ ಮಾಡುತ್ತಿದ್ದರೆ ಅವಳ ವಿರೋಧವಾಗಿ ಸುಳ್ಳು ಸುಳ್ಳು ಆರೋಪಗಳನ್ನು ಕೆಲವು ಮೇಲ್ಜಾತಿಯ ಕುತಂತ್ರಿಗಳು ಮಾಡಿ ಅವಮಾನಗಳನ್ನು ಮಾಡುವುದು ರೂಢಿಗತವಾಗಿ ಮಾಡಿಕೊಂಡು ಸಾಂಪ್ರದಾಯಿಕ ಹೆಸರಲ್ಲಿ ಆಸೆ ಬುರುಕರು ಮಾಡುತ್ತಿದ್ದಾರೆ. ಇನ್ನು ಕೆಲವರು ದಲಿತ ಮಹಿಳೆಯನ್ನು ದೇವದಾಸಿ ಹೆಸರಲ್ಲಿ ಲೈಂಗಿಕ ಶೋಷಣೆ ಮಾಡುವುದರ ಮೂಲಕ ಅವಳನ್ನು ಹೀನಾಯವಾಗಿ ನಡೆದುಕೊಳ್ಳುವುದು ಹೀಗೆ ಸಮಾಜದಲ್ಲಿ ಒಂದಲ್ಲ ಎರಡಲ್ಲ ಹೆಜ್ಜೆ ಹೆಜ್ಜೆಗೂ ದಲಿತ ಮಹಿಳೆ ಸಮಾಜದೊಂದಿಗೆ ಸಂಘರ್ಷವನ್ನು ಮಾಡುತ್ತಲೇ ಹೊರಟಿದ್ದಾಳೆ. ಅದಕ್ಕೆ ಪೂರಕವಾದ ಫಲ ಮಾತ್ರ ಸಿಕ್ಕಿಲ್ಲ. ಆದ್ದರಿಂದ ಇದಕ್ಕೆ ಅಂತ್ಯ ನೀಡುವುದು ಎಲ್ಲರೂ ಶಿಕ್ಷತರಾಗಿ ಸಂಘರ್ಷನಕ್ಕೆ ಇಳಿದಾಗ ಮಾತ್ರ ಸಾಧ್ಯವಾಗುವುದು ಎಂದರೆ ತಪ್ಪಾಗಲಾರದು.

## ದಲಿತ ಮಹಿಳೆಯ ಧಾರ್ಮಿಕ ಶೋಷಣೆಯೊಂದಿಗಿನ ಸಂಘರ್ಷ

ದಲಿತ ಮಹಿಳೆಯನ್ನು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಶೋಷಣೆಯಂತೆಯೇ ನಿಷ್ಕೃಷ್ಟವಾಗಿ ಕಾಣುವಂತಹ ಸಂದರ್ಭಗಳಲ್ಲಿ ಈ ಧಾರ್ಮಿಕ ಕ್ಷೇತ್ರದಲ್ಲಿಯೂ ಮುಂದುವರೆದಿದೆ. ದುಡಿದು, ದಣಿದು ಜೀವನ ಬೇಸತ್ತು ವಿಶ್ರಾಂತಿ ಬಯಸಿಯೋ ಅಥವಾ ಮನಶಾಂತಿಗಾಗಿಯೋ ಅಥವಾ ಸಂತೋಷಕ್ಕಾಗಿಯೋ ದೇವರ ಮೊರೆ ಹೋದಾಗ ಅಲ್ಲಿಯೂ ಜಾತಿಯನ್ನುವ ಪೆಡಂಭೂತ ಬೆನ್ನು ಹಿಂದೆಯೇ ಸಾಗಿ ಅಲ್ಲಿಯು ತೊಂದರೆಯನ್ನು ಅಪಮಾನ, ಅವಮಾನ, ಸಂಘರ್ಷವನ್ನು ದಲಿತ ಮಹಿಳೆ ಈ ಆಧುನಿಕ ಕಾಲದಲ್ಲಿಯೂ ಎದುರಿಸುತ್ತಿದ್ದಾಳೆ ಎಂದರೇನರ್ಥ. ಒಂದು ಈ ಸಮಾಜ ಕೆಟ್ಟದಾರಿಯಲ್ಲಿ ಇನ್ನೂ ಸಾಗುತ್ತಿದೆ ಎಂದರ್ಥ. ಇಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೇ ಈ ನೀಚ ಮನುವಾದಿ ಮಾನವ ಗುಡಿಯಲ್ಲಿನ ಕಲ್ಲು, ಕಲ್ಲಿನ ರೂಪದ ನಿರ್ಜೀವ ವಸ್ತುವಿಗೆ ಬೆಲೆ, ಮಹತ್ವ ನೀಡುತ್ತಿದೆ. ಆದರೆ ಅದರ ಮುಂದೆ ನಿಂತಿರುವ ಜೀವ ಇರುವ ದಲಿತ ಮಹಿಳೆಗೆ ಯಾವುದೇ ಬೆಲೆ ಇಲ್ಲ. ಇದು ಎಷ್ಟೊಂದು ಮೂರ್ಖತನದ ಪರಮಾವಧಿ. ಇದು ಅತ್ಯಂತ

ಖಂಡನೀಯವಾದದ್ದು. ಇದರ ವಿರುದ್ಧ ಧ್ವನಿ ಇಲ್ಲದ ದಲಿತ ಮಹಿಳೆ ಅನಿವಾರ್ಯವಾಗಿ ಅನುಭವಿಸುತ್ತಾಳೆ. ಇನ್ನೂ ವಿಶೇಷ ಹಬ್ಬ-ಹರಿದಿನಗಳ ಸಂದರ್ಭಗಳಲ್ಲಿ ಆ ಕಡೆ ಇವರ ವಾಸನೆಯು ಬೀಳದ ಹಾಗೆ ದೂರ ನಿಲ್ಲಬೇಕಾದ ಅನಿವಾರ್ಯತೆ ಅವಳಿಗೆ ಬಂದಿರುತ್ತದೆ. ಕಾರಣವೆನಂದರೆ ಅಲ್ಲಿ ನೆರವೆರಿದ ಅಲ್ಲಿಗೆ ಆಗಮಿಸಿದವರ ಮೇಲೆ ಇವರು ಅಪ್ಪಿ ತಪ್ಪಿ ಮುಟ್ಟಿದರೇ ಮೈ ಮೈಲಿಗೆಯಾದಿತು, ಅವರು ಅಲ್ಲಿಯೇ ದೂರದಲ್ಲಿ ಇರಲು ಮಾತ್ರ ಯೋಗ್ಯರು ಎನ್ನುವ ಮೌಢ್ಯ, ಬ್ರಾಹ್ಮಣ್ಯ ಅವರಿಂದ ಆ ರೀತಿಯಾಗಿ ಮಾಡಲು ಮುಂದಾಗಿರುವುದು ನಾಚಿಕೆಗೇಡಿನ ಸಂಗತಿ. ಹೀಗೆ ಅನೇಕ ಆಚರಣೆ, ಸಂಪ್ರದಾಯಗಳ ಹೆಸರಲ್ಲಿ ಇವಳನ್ನು ಕಡೆಗಣಿಸಿದೆ. ಆದ್ದರಿಂದ ದಲಿತ ಮಹಿಳೆ ಇನ್ನಾದರು ಎಚ್ಚೆತ್ತುಕೊಂಡು ಸತ್ಯವನ್ನರಿತು, ದೇವರ ಹೆಸರಲ್ಲಿ ಅನೇಕ ಕಟ್ಟುಕಥೆಗಳನ್ನು ಕಟ್ಟಿ ಯಾಮಾರಿಸುವುದನ್ನು ತಿಳಿಯಬೇಕು. ಧರ್ಮದ ಹೆಸರಲ್ಲಿ ಶೋಷಣೆಗೆ ಬಲಿಯಾಗುವುದನ್ನು ಎಷ್ಟು ಸಾಧ್ಯವೋ ಅಷ್ಟು ನಿಲ್ಲಿಸಬೇಕು. ಜೊತೆಗೆ ಸತ್ಯದ ಹಾದಿಯಲ್ಲಿ, ಕಾಯಕದ ಹಾದಿಯಲ್ಲಿ ಜೀವನ ನಡೆಸಬೇಕು. ಇಲ್ಲದಿದ್ದರೆ ನಿರಂತರವಾಗಿ ಅವಳನ್ನು ದೇವರ ಹೆಸರಲ್ಲಿ ಮೋಸಗೊಳಿಸುತ್ತಲೇ ಸಾಗುತ್ತಾರೆ ಎನ್ನುವುದು ಮರೆಯುವಂತಿಲ್ಲ.

## ದಲಿತ ಮಹಿಳೆಯ ಆರ್ಥಿಕ ಶೋಷಣೆಯೊಂದಿಗಿನ ಸಂಘರ್ಷ

ಕೆಳ ಜಾತಿಗಳು ಕೆಳವರ್ಗಗಳು, ಮೇಲ್ವರ್ಗದ ಜಾತಿಗಳು ಮೇಲ್ವರ್ಗಗಳು ಎನ್ನುವ ಮಾತಿನ ಹಿನ್ನಲೆಯಲ್ಲಿ ಪ್ರಸ್ತುತವಾಗಿ ದಲಿತ ಮಹಿಳೆಯ ಆರ್ಥಿಕತೆಯನ್ನು ಅರ್ಥೈಹಿಸಿಕೊಳ್ಳಬೇಕಾಗಿದೆ. ದಲಿತರಲ್ಲಿ ಬಹುತೇಕ ಕುಟುಂಬಗಳು ಇವತ್ತಿಗೂ ಸರಿಯಾದ ಮೂರು ಹೊತ್ತಿನ ಊಟಕ್ಕೂ ತೊಂದರೆಯನ್ನು, ಸುಚಿಯಾದ ಬಟ್ಟೆಯನ್ನು ಧರಿಸಲು ಆಗುತ್ತಿಲ್ಲ. ಇನ್ನು ವಾಸಿಸಲು ಸ್ವಂತದ್ದು, ಸ್ವಚಂದವಾದ ಮನೆಯಂತೂ ಇರುವುದೇ ಇಲ್ಲ. ಅವರದ್ದೇನಿದ್ದರು ಚಿಕ್ಕ ಚಿಕ್ಕ ಕೋಣೆಗಳು ಇಲ್ಲವೇ ಇಕ್ಕಟ್ಟಿನ ಸ್ಥಳಗಳಲ್ಲಿ ಕುಬ್ಜವಾಗಿರುವ ಮನೆಗಳು, ಗುಡಿಸಲಿಗಳು, ಕಟ್ಟಿಗೆ ಮಿಶ್ರಿತ ಮಣ್ಣು ಮನೆಗಳು ಇರುವುದಷ್ಟೆ. ಅಷ್ಟೊಂದು ದಲಿತರು ದುಃಸ್ಥಿತಿಯಲ್ಲಿ ಇರುವುದರಿಂದ ಮನೆಗಳು ಸರಿಯಾಗಿ ಇರುವುದಿಲ್ಲ ಆದ್ದರಿಂದ ಇವರ ಆರ್ಥಿಕ ಮಟ್ಟ ತುಂಬ ಕೆಳಮಟ್ಟದ್ದಾಗಿರುತ್ತದೆ. ಅದೇಗೋ ಮಾಡಿಕೊಂಡು ಕೆಟ್ಟ ಆರ್ಥಿಕ ಪರಸ್ಥಿತಿಯಿಂದ ಹೊರ ಬರಲು ಸಾಕಷ್ಟು ಪ್ರಯತ್ನಿಸಿ ವಿಫಲಗೊಂಡಿರುವುದು ನಿತ್ಯ ನೋಡಬಹುದು. ಆದ್ದರಿಂದಲೇ ಏನೋ ಗೊತ್ತಿಲ್ಲ ದಲಿತ ಕುಟುಂಬಗಳಲ್ಲಿ ಅತಿಹೆಚ್ಚು ಕುಟುಂಬದ ನಿರ್ವಾಹಣೆ ಮಾಡುವುದು ಕೇವಲ ಮಹಿಳೆ ಆಗಿರುತ್ತಾಳೆ. ಈ ದಲಿತ ಮಹಿಳೆ ತನ್ನ ಕುಟುಂಬವನ್ನು ಸಾಗಿಸಲು ಕಷ್ಟಪಟ್ಟು ಕೆಲಸಕ್ಕೆ ಹೋಗುವುದನ್ನು ಮಾಡುತ್ತಿರುವರು. ಕೆಲವೊಮ್ಮೆ ಕೆಲಸ ಮಾಡುವ ಸಂದರ್ಭಗಳಲ್ಲಿ ಸಹಜವಾಗಿಯೇ ಪ್ರತ್ಯೇಕವಾಗಿ ಮತ್ತು ಪರೋಕ್ಷವಾಗಿ ಶೋಷಣೆಗೆ ಒಳಗಾಗುತ್ತಾಳೆ. ದಲಿತ ಮಹಿಳೆಯ ಕೆಲಸದಲ್ಲಿನ ಸಮಸ್ಯೆಯನ್ನು ಇನ್ನೊಂದಿಷ್ಟು ಆಳವಾಗಿ ನೋಡಿದರೆ ಪ್ರತ್ಯೇಕ ಶೋಷಣೆ ಎಂದರೆ ಕೆಲಸದ ನೆಪದಲ್ಲಿ ಅವಳನ್ನು ವಶಪಡಿಸಿಕೊಂಡು ದೌರ್ಜನ್ಯ ಎಸಗುವುದು, ಪರೋಕ್ಷವಾಗಿ ಎಂದರೆ ಬೇರೇನು ಅಲ್ಲ; ಅವಳನ್ನು ತುಂಬ ಕೆಳಮಟ್ಟದ ಕೆಲಸಗಳನ್ನು ಮಾಡಲು ನೇಮಿಸುವುದು. ಮನೆ ಕೆಲಸ ಕಸ-ಮುಸರಿ ತೊಳೆಯುವುದು, ಶೌಚಾಲಯ ಸುಚಿಗೊಳಿಸುವುದು, ಡ್ರೆನೇಜ್‌ಗಳಂಥವುಗಳನ್ನು ಸುಚಿಗೊಳಿಸುವುದು, ಮನೆಯ ಸಾಕು ಪ್ರಾಣಿಗಳನ್ನು ಸುಚಿಗೊಳಿಸುವುದು, ಅವುಗಳಿಗೆ ಆಹಾರ ಒದಗಿಸುವುದು ಇತ್ಯಾದಿ ಕೆಲಸಗಳನ್ನು ನೋಡಿಕೊಳ್ಳವಂತೆ ನೇಮಿಸಿಕೊಳ್ಳುವುದರ ಮೂಲಕ ಪರೋಕ್ಷವಾಗಿ ಅವಳನ್ನು ಶೋಷಣೆ ಮಾಡುವುದು. ಇನ್ನೊಂದು ಕಡೆಯಾಗಿ ದಲಿತ ಮಹಿಳೆ ಒಂದಿಷ್ಟು ತಿಳುವಳಿಕೆಯುಳ್ಳವಳಾಗಿದ್ದರೆ ಆರ್ಥಿಕವಾಗಿ ಸಬಲಗೊಳ್ಳಲು ಸಂಘ-ಸಂಸ್ಥೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರೆ ಅಲ್ಲಿಯೂ ಇವಳಿಗೆ ಸಿಗಬೇಕಾದ ಸೌಲಭ್ಯಗಳನ್ನು ಸೂಕ್ತ ಕಾಲದಲ್ಲಿ ನೀಡದೇ ಸತಾಯಿಸುವುದು, ಸತಾಯಿಸುವಂತೆ ಇತರರ ಮೂಲಕ ಮಾಡಿಸುವುದು, ಇಲ್ಲವೇ ಆ ಸೌಲಭ್ಯಗಳು ಇವಳಿಗೆ ಸಿಗದಂತೆ ಮಾಡುವುದು ಏಕೆಂದರೆ ಎಲ್ಲಿ ಇವಳು ಸಬಲರಾದರೇ ಮುಂದಿನ ನಮ್ಮ ಕೆಲಸ ಕಾರ್ಯಗಳಿಗೆ ಇವಳು ಬರುವುದಿಲ್ಲ ಆದ್ದರಿಂದ ನಮ್ಮ ಕೆಲಸ ಕಾರ್ಯಗಳು ನಿಲ್ಲುವ ಸಂಭವವಿರುತ್ತದೆ ಇವೆಲ್ಲ ಕೆಲಸ ಕಾರ್ಯಗಳನ್ನು ಮಾಡುವವರಾದರೂ ಯಾರು? ಎಂಬ ಯಕ್ಷ ಪ್ರಶ್ನೆ ಅವರಿಗೆ ಕಾಡುತ್ತಿರುತ್ತದೆ. ಆ ಹಿನ್ನಲೆಯಲ್ಲಿ ಅವಳನ್ನು ಆರ್ಥಿಕ ಸಬಲರಾಗಲು ಬಿಡುವುದಿಲ್ಲ.

ಮತ್ತೊಂದು ಕಡೆ ಇವಳ ಕಿತ್ತು ತಿನ್ನುವ ಬಡತನ, ಆಹಾರಕ್ಕಾಗಿ ಮನೆಯಲ್ಲಿ ಅತೊರಯುವ ಮಕ್ಕಳ ಆಕ್ರಂಧನ, ಬೇಜವಾಬ್ದಾರಿ ಗಂಡನ ಕುಡಿತ ಚಟ ಮುಂತಾದ ಕೌಟುಂಬಿಕ ಸಮಸ್ಯೆಗಳ ಕಾರಣಗಳಿಂದ ಎಂಥ ಕೆಲಸವಾದರು ಸರಿಯೇ

ಅನಿವಾರ್ಯವಾಗಿ ಮಾಡಲು ದಲಿತ ಮಹಿಳೆ ಸಿದ್ಧಳಾಗುತ್ತಾಳೆ. ಇದೇ ಸಮಸ್ಯೆಯನ್ನು ಬಂಡವಾಳ ಮಾಡಿಕೊಂಡ ಮಾಲಿಕ ಅಥವಾ ಕೆಲಸ ಕೊಡುವ ದುಷ್ಟ ಇಲ್ಲಸಲ್ಲದ ಕೆಲಸದ ಹೊರೆಯನ್ನು ಬೇಕು ಬೇಕು ಅಂತಲೇ ಇವಳ ಮೇಲೆ ಹಾಕುವುದರ ಮೂಲಕ ಅಧಿಕವಾಗಿ ದುಡಿಯುವಂತೆ ಮಾಡಿ ಅವಳನ್ನು ಅನಾರೋಗ್ಯಕ್ಕೆ ಕಾರಣೀಕರ್ತರಾಗುತ್ತಾನೆ. ಕೆಲವೊಮ್ಮೆ ಎಂಥ ಸಂದಿಗ್ಧ ಪರಿಸ್ಥಿತಿಗೆ ಬರುತ್ತಾರೆ ಎಂದರೇ ತನ್ನ ಮೈಮಾರಾಟ ಮಾಡಿಕೊಳ್ಳುವ ಹಂತಕ್ಕೆ ಬರುತ್ತಾಳೆ. ಇಲ್ಲವೇ ಒಂದು ತುತ್ತು ಅನ್ನಕ್ಕಾಗಿ ಭಿಕ್ಷೆಬೇಡಿದರೂ ಪರವಾಗಿಲ್ಲ ಎನ್ನುವ ಹಂತಕ್ಕೆ ಬಂದು, ಭಿಕ್ಷೆ ಬೇಡಿದ ಅನ್ನವನ್ನು ಮನೆಯ ಮಕ್ಕಳಿಗೆ ಉಣಬಡಿಸುತ್ತಾಳೆ. ಇದು ಎಷ್ಟೊಂದು ದುರಂತವಾದ ಸಂಗತಿ. ಇವೆಲ್ಲ ಸಂಗತಿಗಳು ಇಡೀ ಮಾನವ ಕುಲಕ್ಕೆ ಕಳಂಕ ತಂದೊಡ್ಡುವ ಸ್ಥಿತಿಯಾಗಿರುತ್ತದೆ. ಹೀಗೆ ಅನೇಕ ರೀತಿಯಲ್ಲಿ ದಲಿತ ಮಹಿಳೆ ತನ್ನದಲ್ಲದ ತಪ್ಪಿಗೆ ತಾನು ಶಿಕ್ಷೆಯನ್ನು ಅನುಭವಿಸುತ್ತಾಳೆ. ಹೋರಾಟ ಮಾಡುತ್ತಾಳೆ, ನಿರಂತರವಾಗಿ ಸಂಘರ್ಷ ಮಾಡುತ್ತ ಮಾಡುತ್ತ ಕೊನೆಗೆ ಬಲಿಯೂ ಆಗುತ್ತಾಳೆ ಅಂಥ ಪರಿಸ್ಥಿತಿ ದಲಿತ ಮಹಿಳೆಗೆ ಬಂದು ನಿಂತಿದೆ. ಒಟ್ಟಿನಲ್ಲಿ ಅವಳು ಆರ್ಥಿಕ ಬಿಕ್ಕಟ್ಟಿನಿಂದ ಇಂದಿಗೂ ಹೊರ ಬರಲು ಸಾಧ್ಯವಾಗುತ್ತಿಲ್ಲ.

## ದಲಿತ ಮಹಿಳೆಯ ಶೈಕ್ಷಣಿಕ ಶೋಷಣೆಯೊಂದಿಗಿನ ಸಂಘರ್ಷ

ಶಿಕ್ಷಣ ಒಂದು ಶಕ್ತಿಯುತ ಮಾಧ್ಯಮ. ಶಿಕ್ಷಣ ಒಂದು ಶಕ್ತಿ, ಓರ್ವ ಸುಶಿಕ್ಷಿತ ವ್ಯಕ್ತಿ ಎಂಥ ಸಂದರ್ಭಗಳಲ್ಲಿಯೂ ಎಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಯಾವುದೇ ತೊಂದರೆ ಇಲ್ಲದೇ ಹೊರ ಬರಬಲ್ಲವನಾಗಿರುತ್ತಾನೆ. ಆದ್ದರಿಂದಲೇ ದೇಶ-ವಿದೇಶಗಳಲ್ಲಿ ಶಿಕ್ಷಣಕ್ಕಾಗಿ ಸಾಕಷ್ಟು ಮಹತ್ವನ್ನು ನೀಡಿವೆ. ಇದರಿಂದ ದೇಶದ ಯಾವ ಜಾತಿ ಧರ್ಮಗಳು ಹೊರತಾಗಿಲ್ಲ. ದುರಾದೃಷ್ಟವಶತ ದಲಿತರಿಗೆ ಶಿಕ್ಷಣ ನೂರಕ್ಕೆ ನೂರರಷ್ಟು ಫಲಪ್ರದವಾಗಿಲ್ಲ ಎನ್ನುವಂತಹದ್ದು. ಇದಕ್ಕೆ ಕಾರಣಗಳನ್ನು ಗುರುತಿಸುವ ಪ್ರಯತ್ನವಾಗಬೇಕಿದೆ. ಇದಕ್ಕೆ ಪೂರಕವಾಗಿ ಸಾಕಷ್ಟು ಅಧ್ಯಯನಗಳು, ಸಂಶೋಧನೆಗಳು ಅವಶ್ಯಕ. ಪ್ರಸ್ತುತವಾಗಿ ದಲಿತರ ಶಿಕ್ಷಣವನ್ನು ಕುಂಠಿತಗೊಳ್ಳಲು ಕಾರಣಗಳನ್ನು ಗುರುತಿಸುವುದಾದರೆ ಬಹಳ ಮುಖ್ಯವಾಗಿ ಬಡತನ, ಹೇರಳವಾದ ಅನಕ್ಷರತೆಯ ಗುಂಪುಗಳು, ಶಿಕ್ಷಣದ ಮಹತ್ವದ ಬಗ್ಗೆ ತಿಳುವಳಿಕೆ ಇಲ್ಲದಿರುವುದು, ಶಿಕ್ಷಣದ ನಿರಾಸಕ್ತಿ, ಶಾಲಾ-ಕಾಲೇಜುಗಳಲ್ಲಿನ ಶೋಷಿತಗೊಂಡವರ ಫಲಿತಾಂಶಗಳು, ಅಲ್ಲಿನ ತಾರತಮ್ಯ, ಜಾತಿನಿಂಧನೆ ಇತ್ಯಾದಿ ಅಂಶಗಳನ್ನು ಉಲ್ಲೇಖಿಸಲು ಮಾತ್ರ ಸಾಧ್ಯವಾದಿತು. ಇದರಾಚೆಗೂ ಅವರ ಸಮಸ್ಯೆಗಳಿವೆ, ಸಂಘರ್ಷಗಳಿವೆ. ಇವತ್ತಿನ ಅಂಕಿ-ಅಂಶಗಳನ್ನು ತೆಗೆದುಕೊಂಡಾಗ ಶಿಕ್ಷಣದಿಂದ ವಂಚಿತಳಾದವರ ಪ್ರಮಾಣದಲ್ಲಿ ಅತೀ ಹೆಚ್ಚು ಅಂದರೆ ಬೇರೆ ಯಾರು ಅಲ್ಲ; ಅವಳು ದಲಿತ ಹೆಣ್ಣುಮಗಳು ಆಗಿದ್ದಾಳೆ.

ಇತ್ತೀಚಿನ ಕೋವಿಡ್-೧೯ ಸಂಕ್ರಾಮಿಕ ಸಂದರ್ಭದಲ್ಲಿ ದಲಿತ ಹೆಣ್ಣುಮಕ್ಕಳ ಶಿಕ್ಷಣ ಎನ್ನುವುದು ಮರೀಚಿಕೆಯಾಗಿದೆ. ಇವತ್ತಿನ ಈ ಆನ್‌ಲೈನ್ ತರಗತಿಗಳು ಕೇವಲ ಉಳ್ಳವರಿಗೆ ಮಾತ್ರ ಎನ್ನುವಂತಾಗಿದೆ. ಶಿಕ್ಷಣ ಕೇವಲ ಯಾರಲ್ಲಿ ದುಡ್ಡು ಇದೆಯೋ, ಯಾರಲ್ಲಿ ಆ್ಯಂಡ್ರುಡ್ ಫೋನ್ ಇದೆಯೋ ಅವರಿಗೆ ಮಾತ್ರ ಶಿಕ್ಷಣದ ಜ್ಞಾನ ಸಿಗುವಂತಾಗಿದೆ. ಇನ್ನು ದಲಿತ ಮಕ್ಕಳಿಗೆಲ್ಲಿ ಶಿಕ್ಷಣ ಸಿಗಬೇಕು? ಖಂಡಿತವಾಗಿಯೂ ಎಲ್ಲಾರಿಗೂ ಸಮನಾಗಿ ಈ ಶಿಕ್ಷಣ ಸಿಗುತ್ತಿಲ್ಲ. ಒಂದೊತ್ತಿನ ಊಟಕ್ಕಾಗಿ ಪರದಾಡುವ ದಲಿತರು ಇನ್ನು ಆ್ಯಂಡ್ರೆಡ್ ಮೋಬೈಲ್‌ಗಳನ್ನು ಖರಿಧಿಸುವ ಮತ್ತು ಅವರ ಮಕ್ಕಳ ಕಲಿಕೆಗೆ ಅವಕಾಶ ಮಾಡಿಕೊಡಲು ಸಾಧ್ಯವಾಗಿತ್ತಿಲ್ಲ. ಆದ್ದರಿಂದಲೇ ಇವರ ಶಿಕ್ಷಣ ಇನ್ನಷ್ಟು ದೂರ ಹೋಗುತ್ತಿದೆ.

ಇನ್ನೊಂದು ಕಡೆ ಶಿಕ್ಷಣ ಸಂಸ್ಥೆಗಳಲ್ಲಿ, ಶಾಲಾ-ಕಾಲೇಜುಗಳಲ್ಲಿ ಕಲಿಯುವ ದಲಿತ ಹೆಣ್ಣುಮಕ್ಕಳಿಗೆ ಯಾರದೇ, ಯಾವುದೇ ಧೈರ್ಯ ಮತ್ತು ಬೆಂಬಲವಿಲ್ಲ. ಇವರ ಕಷ್ಟ-ಸುಖಕ್ಕೆ ಬೆನ್ನೆಲುಬಾಗಿ ನಿಲ್ಲಲು ಯಾವ ಸಂಘ-ಸಂಸ್ಥೆಗಳು ಈ ಗ್ರಾಮೀಣ ಪ್ರದೇಶಗಳಲ್ಲಿ ಇಲ್ಲದಿರುವುದುರಿಂದ; ದಲಿತ ಹೆಣ್ಣುಮಕ್ಕಳನ್ನು ತೀರ ಕೆಟ್ಟದಾಗಿ ನೋಡುವ ಇಲ್ಲವೇ ತೀರ ಕೆಟ್ಟದಾಗಿ ವರ್ತಿಸುವ ಆ ಶಿಕ್ಷಣ ಸಂಸ್ಥೆಯ ಸಹಪಾಠಿಗಳು ಕೆಲವೊಮ್ಮೆ ಶಿಕ್ಷಕರು, ಪ್ರಾಧ್ಯಾಪಕರುಗಳು ನಡೆಸಿಕೊಳ್ಳುವ ಹಿನ್ನಲೆಯಲ್ಲಿ ಅಥವಾ ಯಾವುದಾದರೂ ತಪ್ಪುಗಳನ್ನು ವಿನಃಕಾರಣ ಸೃಷ್ಟಿಸಿ ಅದರಿಂದ ಹೊರಬರುದಂತೆ ವ್ಯವಸ್ಥಿತವಾದ ತಂತ್ರಗಳನ್ನು ರಚಿಸಿ ಅದನ್ನು ಸದಾ ತಮ್ಮ ಮುಷ್ಠಿಯಲ್ಲಿರಿಸಿಕೊಳ್ಳುತ್ತಾರೆ. ಈ ದುಷ್ಟರ ಯೋಜನೆಗಳನ್ನು ಸರಿಯಾಗಿ

ಗುರುತಿಸದೇ ಸರಿಯಾಗಿ ಪ್ರತಿತಂತ್ರಗಳನ್ನು ಹಾಕಿಕೊಳ್ಳದೇ, ಸರಿಯಾದ ಉಪಾಯವನ್ನು ಮಾಡದೇ ತನ್ನತಪ್ಪಿನಲ್ಲದ ತಪ್ಪಿಗೆ ಸಿಕ್ಕು ಒದ್ದಾಡುತ್ತ ಆ ದುಷ್ಟಶಕ್ತಿಗಳಿಗೆ ಬಲಿಯಾಗಿ ಶಿಕ್ಷಣಕ್ಕೆ ದೊಡ್ಡ ವಿರಾಮ ಇಡುವ ಪ್ರಸಂಗಗಳು ಸಾಕಷ್ಟು ನಮ್ಮ ಮುಂದಿವೆ. ಇನ್ನೂ ಕೆಲವು ಜಾತಿ ಹೆಸರಲ್ಲಿ ಉನ್ನತ ವ್ಯಾಸಂಗದಲ್ಲಿರುವ ದಲಿತ ಹೆಣ್ಣುಮಕ್ಕಳಿಗೆ ಸರಿಯಾದ ಆಧ್ಯತೆ ನೀಡುವುದಿಲ್ಲ. ಬೇಕು ಬೇಕು ಅಂತಲೇ ಅವಳನ್ನು ನಿರ್ಲಕ್ಷೆ ಮಾಡುವುದುಂಟು. ಉದ್ದೇಶಪೂರ್ವಕವಾಗಿಯೇ ಅವಳಿಗೆ ದೊರಕಬೇಕಾದ ಸೌಲಭ್ಯಗಳನ್ನು ವಂಚಿಸುತ್ತಾರೆ. ಉದ್ದೇಶಪೂರ್ವಕವಾಗಿಯೇ ಸ್ಥಾನವನ್ನು ತಪ್ಪಿಸುತ್ತಾರೆ. ಇದರೊಂದಿಗೆ ಒಂದಿಷ್ಟು ಪ್ರಸ್ತಾಪವನ್ನು ಮುಂದಿಟ್ಟು ಅದಕ್ಕೆ ಒಪ್ಪಿದರೆ ಮಾತ್ರ ಮುಂದಿನ ಯಾವುದೇ ಕಲಿಕೆ ತೊಂದರೆಯಾಗುವುದಿಲ್ಲ ಎನ್ನುವ ಭರವಸೆಯೊಂದಿಗೆ ದಲಿತ ಹೆಣ್ಣು ಮಕ್ಕಳನ್ನು ಬಳಸಿಕೊಳ್ಳುವ, ಲೈಂಗಿಕವಾಗಿ ಶೋಷಣೆ, ದೌರ್ಜನ್ಯ ಮಾಡುವ ಮೂಲಕ ತಮ್ಮ ತೃಷೆಯನ್ನು ಇಡೇರಿಸಿಕೊಳ್ಳುತ್ತ ಸಾಗಿ ದಲಿತ ಹೆಣ್ಣುಮಕ್ಕಳು ಶಿಕ್ಷಣದ ಕಡೆ ಮನಸ್ಸು ಇಲ್ಲದಂತೆ ಮಾಡುತ್ತಾರೆ. ಇನ್ನೊಂದು ಹೆಜ್ಜೆ ಮುಂದೇ ಹೋಗಿ ಅದಕ್ಕೂ ಒಪ್ಪದಿದ್ದಾಗ ಅವಳ ಮಾನ, ಮರ್ಯಾದೆಯನ್ನು ಹರಾಜು ಹಾಕುವ ಬೆದರಿಕೆಯೊಡ್ಡಿ ಮತ್ತಷ್ಟು ಮಾನಸಿಕವಾಗಿ ಕುಗ್ಗುವಂತೆ ಮಾಡುತ್ತಾರೆ. ಕೆಲವೊಮ್ಮೆ ದಲಿತ ಹೆಣ್ಣುಮಕ್ಕಳೆಂಬ ಒಂದೇ ಕಾರಣಕ್ಕೆ ಅಪಮಾನ, ಅವಮಾನ ಮಾಡುತ್ತ ಕೊನೆಗೆ ಅವಳೇ ತನ್ನ ಶಿಕ್ಷಣದಿಂದ ಹೊರಹೋಗಬೇಕು ಆನಿಟ್ಟಿನಲ್ಲಿ ವಾತಾವರಣವನ್ನು ರಚಿಸುತ್ತಾರೆ. ಈ ರೀತಿಯಾಗಿ ಅದೆಷ್ಟೋ ಸಮಸ್ಯೆಗಳು, ಸಂಘರ್ಷಗಳು ದಲಿತ ಮಹಿಳೆ ಅನುಭವಿಸುತ್ತಿದ್ದಾಳೆ ಎನ್ನುವುದನ್ನು ಗುರುತಿಸಿ ಪರಿಹರಿಸಬೇಕಿದೆ.

## ದಲಿತ ಮಹಿಳೆಯ ಹಕ್ಕುಗಳು

ಉಚಿತವಾಗಿ ಉತ್ತಮ ಶಿಕ್ಷಣ ನೀಡಬೇಕು, ದುಡಿಯುವ ಕೈಗಳಿಗೆ ಉದ್ಯೋಗ ಸಿಗಬೇಕು, ಭೂಮಾಲಿಕತ್ವ ಪದ್ದತಿ ತೆಗೆದುಹಾಕಬೇಕು, ಗ್ರಾಮೀಣದಲ್ಲಿನ ದೇವಾಲಯಗಳ ಗರ್ಭಗುಡಿಗಳಲ್ಲಿ ಮುಕ್ತ ಅವಕಾಶ ನೀಡಬೇಕು, ಮೀಸಲಾತಿ ಜಾರಿಯಲ್ಲಿರಬೇಕು, ಅಸಮಾನತೆ, ದೌರ್ಜನ್ಯ, ಶೋಷಣೆ, ಅವಮಾನ, ಅಪಮಾನ ಮಾಡುವ ದುಷ್ಟರಿಗೆ ಶಿಕ್ಷೆ ನೀಡುವ ಉಗ್ರ ಕಾಯ್ದೆಗಳು ಅನುಷ್ಠಾನಗೊಳಿಸಬೇಕು, ದುಡಿಯುವ ಕುಟುಂಬಗಳಿಗೆ ಭೂಮಿ ನೀಡಬೇಕು, ಸಮಾನ ಆಸ್ತಿ ಸಿಗಬೇಕು, ಹುಳುವವನೇ ಭೂ ಒಡೆಯನಾಗಬೇಕು, ರೋಹಿತ ವೇಮುಲು ಆ್ಯಕ್ಟ್ ಜಾರಿ ಆಗಬೇಕು ಮತ್ತು ಆರೋಗ್ಯ, ಪೌಷ್ಟಿಕ ಆಹಾರ ಮತ್ತು ಅಗತ್ಯ ವಸ್ತುಗಳನ್ನು ಒದಗಿಸಬೇಕು.

## ದಲಿತ ಮಹಿಳೆಯರ ಮುಂದಿರುವ ಸವಾಲುಗಳು

- ಅಂತರ್‌ಜಾತಿ ವಿವಾಹಗಳು ಸಂಭವಿಸಿದ್ದಲ್ಲಿ ಮಾರ್ಯಾದೆ ಹತ್ಯೆಗಳು ಶೇಕಡ ೬೫ರಿಂದ ೭೫ರಷ್ಟು ಹೆಚ್ಚು ಪ್ರಮಾಣದಲ್ಲಾಗುತ್ತಿರುವುದು ಸವಾಲಾಗಿದೆ.
- ದಲಿತ ಮಹಿಳೆಯರ ಮೇಲೆ ಹಲ್ಲೆಗಳು, ದೌರ್ಜನ್ಯಗಳು, ಶೇಕಡ ೮೦ರಷ್ಟು ಪ್ರಮಾಣದಲ್ಲಿ ಆಗುತ್ತಿರುವುದು ಆತಂಕವಾಗಿದೆ.
- ಮತಾಂತರ ಆಗಬೇಡಿ ಎನ್ನುವ ಹುನ್ನಾರುಗಳು ನಡೆಯುತ್ತಿವೆ.
- ಬಹು ಪತ್ನಿಯರು ಬೇಕು ಎನ್ನುವ ಹಂಬಲವುಳ್ಳ ಸವರ್ಣೀಯರು ದಲಿತ ಮಹಿಳೆರನ್ನು ಬಳೆಸಿಕೊಳ್ಳುವುದು ಹೆಚ್ಚುತ್ತಿವೆ.
- ದಲಿತ ಮಹಿಳೆಯರನ್ನು ದಾರಿ ತಪ್ಪಿಸುವ ಕಾರ್ಯಗಳು ಹೆಚ್ಚಿವೆ.
- ದಲಿತ ದಲಿತರ ಮಧ್ಯದಲ್ಲಿಯೇ ಅಶಾಂತಿಯನ್ನುಂಟು ಮಾಡುವುದರೊಂದಿಗೆ ಅವರಲ್ಲಿಯೇ ಆಂತರಿಕ ಕಲಹಗಳನ್ನು ಸವರ್ಣೀಯರು ಸೃಷ್ಟಿಸುತ್ತಿದ್ದಾರೆ.
- ದಲಿತರ ಧ್ವನಿಯಾಗಿ ಕಾರ್ಯನಿರ್ವಹಿಸುತ್ತಿರುವ ಕೆಲವು ದೇವದಾಸಿ ಮಹಿಳಾ ಹೋರಾಟಗಾರರಿಗೆ ದಬ್ಬಾಳಿಕೆ, ಬೆದರಿಕೆ, ಅಪಮಾನಗಳನ್ನು ಹೆಚ್ಚು ಹೆಚ್ಚಾಗಿ ಮಾಡುತ್ತಿದ್ದಾರೆ.

- ದಲಿತ ಮಹಿಳೆಗೆ ಆರೋಗ್ಯ, ಆಹಾರ ಮತ್ತು ಅಪೌಷ್ಠಿಕತೆಯ ಸಮಸ್ಯೆಗಳು ಅಧಿಕಗೊಳ್ಳುತ್ತಿವೆ.
- ದಲಿತ ಮಹಿಳೆಗೆ ನೀಡಬೇಕಾದ ಸೌಕರ್ಯಗಳನ್ನು ನೀಡದೇ, ಸರ್ಕಾರ ತನ್ನ ಜವಾಬ್ದಾರಿಕೆಯಿಂದ ಹೊರ ಹೋಗುತ್ತಿದೆ.
- ಸಂವಿಧಾನದ ಕಾಯ್ದೆ-ಕಾನೂನುಗಳನ್ನು ಸರ್ಕಾರ ನಿರ್ವಹಿಸುವಲ್ಲಿ ಸರಿಯಾಗಿ ಅನುಷ್ಠಾನಗೊಳಿಸುವಲ್ಲಿ ವಿಫಲಗೊಂಡಿವೆ, ಅವುಗಳನ್ನು ಸರಿಪಡಿಸಬೇಕಿದೆ.
- ಶತ-ಶತಮಾನಗಳಿಂದ ಉಳಿಸಿಕೊಂಡು ಬಂದಿರುವ ಕೆಲಸಗಳನ್ನು ಇನ್ನು ಉಳಿಸಿಕೊಂಡು ಹೋಗಬೇಕು ಎನ್ನುವ ಬಯಕೆ ಸಂಪ್ರದಾಯವಾದಿಗಳ ಸಂಘಟನೆಗಳದ್ದಾಗಿದೆ.

## ಪರಿಹಾರ ಕ್ರಮಗಳು

- ಕಡ್ಡಾಯವಾಗಿ ಸಂವಿಧಾನಾತ್ಮಕ ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಆಡಳಿತಾತ್ಮಕ ಅಭಿವೃದ್ಧಿ ಕಾರ್ಯಕ್ರಮಗಳು ಕಟ್ಟುನಿಟ್ಟಾಗಿ ಜಾರಿಯಾಗಬೇಕು
- ಭೂ ಸುಧಾರಣೆ ಕಾಯ್ದೆ ಜಾರಿಗೆ ತರಬೇಕು
- ಸ್ವಾವಲಂಭಿ ಬದುಕು ಕಟ್ಟಿಕೊಳ್ಳುವಂತೆ ಕಾಳಜೀವಹಿಸಬೇಕು
- ದಲಿತರು ಹೊಸ ಚಳುವಳಿಗಳು ಕಟ್ಟಬೇಕು
- ಜಾತಿ ವ್ಯವಸ್ಥೆ ಅರ್ಥಮಾಡಿಕೊಳ್ಳಬೇಕು
- ಸಾಮಾಜಿಕ ನ್ಯಾಯ ಅರ್ಥಮಾಡಿಕೊಳ್ಳಬೇಕು
- ಮಹಿಳಾ ಶಿಕ್ಷಣಕ್ಕೆ ಆದ್ಯತೆ ನೀಡಬೇಕು
- ಜಾತಿ ದೌರ್ಜನ್ಯಗಳ ನಿವಾರಣೆಗಾಗಿ ದೊಡ್ಡಮಟ್ಟದಲ್ಲಿ ಸಂಘಟನೆಗಳು ಶಕ್ತಿಯುತವಾಗಿ ಬಲಗೊಳ್ಳಬೇಕು; ಅದಕ್ಕೆ ಸರ್ಕಾರಗಳು ಪ್ರೊತ್ಸಾಹಿಸಬೇಕು
- ಅಂತರ್‌ಜಾತಿ ವಿವಾಹಕ್ಕೆ ಪ್ರೋತ್ಸಾಹ ನೀಡಬೇಕು
- ಹಿಂದತ್ವ, ಅಲ್ಪಸಂಖ್ಯಾತರ ಮತಾಂತರ ವಿರುದ್ಧ ಹೋರಾಟಕ್ಕೆ ಸಜ್ಜಾಗಬೇಕು
- ಯುವ ಸಮೂಹಕ್ಕೆ ಅಗತ್ಯ ತಿಳುವಳಿಕೆ ನೀಡಬೇಕು
- ತಪ್ಪು ಸಿದ್ಧಾಂತಗಳನ್ನು ನಿರಾಕರಿಸಬೇಕು
- ಕೇವಲ ಜಾತಿಯಿಂದ ಒಂದೇ ಹೋರಾಟ ಸಾಧ್ಯವಿಲ್ಲ ಆಗಾಗಿ ಶೋಷಿತರನ್ನು ಒಗ್ಗೂಡಿಸಿಬೇಕು
- ಜನಸಂಖ್ಯೆಗನುಗುಣವಾಗಿ ಸರ್ಕಾರ ಸಹಾಯ ಹಸ್ತ ಚಾಚಬೇಕು
- ನಲ್ವತ್ತು ವರ್ಷಗಳಿಂದ ಮಹಿಳಾ ಸಬಲೀಕರಣಕ್ಕಾಗಿರುವ ಯೋಜನೆಗಳನ್ನು ಮೌಲ್ಯಮಾಪನ ಮಾಡಬೇಕು; ಅದರಲ್ಲಿನ ತಪ್ಪು ಒಪ್ಪುಗಳನ್ನು ಸರಿಪಡಿಸಬೇಕು
- ದಲಿತರು ಸಮಾವೇಶಗೊಳ್ಳಬೇಕು, ಸಂಘಟನೆಗೊಳ್ಳಬೇಕು, ಅವರ ಕೌಶಲ್ಯಗಳಿಗೆ ಪ್ರೋತ್ಸಹಿಸಬೇಕು, ಅವರ ಜೀವನ ಮಟ್ಟ ಸುಧಾರಿಸಬೇಕು
- ದಲಿತರ ಕುರಿತು ಸಂಶೋಧನೆಗಳು ಹೆಚ್ಚಾಳವಾಗಬೇಕು.

## ಕೊನೆಯ ಮಾತು

ಹೀಗೆ ಶಿಕ್ಷಣದಲ್ಲಿ, ಉದ್ಯೋಗದಲ್ಲಿ, ಬಡತನದಲ್ಲಿ, ಆರೋಗ್ಯದಲ್ಲಿ, ಆಹಾರದ ಕೊರತೆಯಲ್ಲಿ, ಅಪೌಷ್ಠಿಕತೆಯಲ್ಲಿ, ರಕ್ತಹೀನತೆಯಲ್ಲಿ, ಜಾತಿ ನಿಂಧನೆಯಲ್ಲಿ, ಜಾತಿ ತಾರತಮ್ಯೆಯಲ್ಲಿ, ಅವಮಾನ, ಅಪಮಾನಗಳಲ್ಲಿ, ಲೈಂಗಿಕ ಶೋಷಣೆಗಳಲ್ಲಿ, ಆತ್ಮಹತ್ಯೆಗಳಂತಹ ಸಂದರ್ಭಗಳಲ್ಲಿ, ದೇವದಾಸಿ ಪದ್ಧತಿ ವಿರೋಧದಲ್ಲಿ, ರಾಜಕೀಯ ಸಂಘರ್ಷಗಳಲ್ಲಿ, ಕಾನೂನು ಹಕ್ಕುಗಳ ಪಡೆಯುವಲ್ಲಿನ ಸಂಘರ್ಷಗಳಲ್ಲಿ ದಲಿತ ಮಹಿಳೆ ಸಾಕಷ್ಟು ಸಮಸ್ಯೆಗಳನ್ನು, ಸಂಘರ್ಷಗಳನ್ನು ಅನುಭವಿಸುತ್ತಿದ್ದಾಳೆ.

ಇದಕ್ಕೆ ಪೂರಕವಾದ ವಾತಾವರಣವನ್ನು ಸರ್ಕಾರಗಳು ಸಂಘ-ಸಂಸ್ಥೆಗಳು ಗಮನಹರಿಸಿದ್ದೇ ಆದಲ್ಲಿ ಖಂಡಿತವಾಗಿಯು ದಲಿತ ಮಹಿಳೆಯನ್ನು ಸಬಲಳನ್ನಾಗಿ ಮಾಡಬಹುದು. ಜೊತೆಯಲ್ಲಿ ನಿರ್ಲಕ್ಷಿತ ಈ ದಲಿತ ಹೆಣ್ಣುಮಕ್ಕಳ ಮೇಲೆ ವಿಶೇಷ ಗಮನ ಹರಿಸಬೇಕು ಅವಳ ಏಳ್ಗೆಗಾಗಿ ಶ್ರಮಿಸಬೇಕು ಮತ್ತು ಅವಳ ಜೀವನ ಉತ್ತಮಗೊಳ್ಳಲು ಸಾಕಷ್ಟು ಸೌಲಭ್ಯಗಳನ್ನು ನೀಡವುದರ ಮೂಲಕ ಅವಳನ್ನು ಸಮಾಜಮುಖಿಗೊಳಿಸಬೇಕು. ಇದು ಕೇವಲ ಸರ್ಕಾರ, ಸಂಘ-ಸಂಸ್ಥೆಗಳು ಒಂದೇ ಅಲ್ಲ ಸಾರ್ವಜನಿಕರು, ಪ್ರಗತಿಪರರು ಕೈಗೂಡಿಸಬೇಕು. ಅಂದಾಗ ದಲಿತ ಮಹಿಳೆ ಸಾಮಾಜಿಕ ಬಿಕ್ಕಟ್ಟುಗಳನ್ನು ಹೋಗಲಾಡಿಸಿಕೊಂಡು ಅವಳು ಸಬಲೀಕರಣಗೊಳ್ಳಲು ಸಾಧ್ಯವಾಗುತ್ತದೆ.

## ಕೊನೆ ಟಿಪ್ಪಣಿ

೧. ನ್ಯಾ.ನಾಗಮೋಹನದಾಸ್, ೨೦೨೧

೨. ನ್ಯಾ.ನಾಗಮೋಹನದಾಸ್, ೨೦೨೧

೩. ನೀತಿ ಆಯೋಗ, ೨೦೨೧

೪. ಸಾಮಾಜಿಕ ಜಾಲತಾಣ ೨೦೨೧

೫. ಮಾಳಮ್ಮ ಬಿ., ಬಳ್ಳಾರಿ ೨೦೨೧

## References

http://niti.gov.in Accessed on 1st July 2021

Justice Nagamohandas H. N., Special Speech in *'Samvidhana Odu'* Online Webinar on 16-6-2021, Program organized by Karnataka Jaanapada University, Siggavi. Association with State National Service Scheme and Vijayanagar ShriKrishnadevaraya University, Ballari.

Justice Nagamohandas H. N., Special Speech in *'Nomads welfare in the wave of Covid-19 challenges and Aspiration'* Online Workshop on 13-7-2021to 16-7-2021, organized by Kannada University, Hampi Association with Karnatka Jaanapada University and Karnataka Alemari, Are-Alemari, Vimukta Budakkatugal okkuta, Bangalore.

Malamma B. Ballari Special Speech in *'Dalitara Hakkugalu Mattu Saamajika Nyaya Samrakshna Abhiyana'* Online Workshop on 13-06-2021 to 22-06-2021 organized by Dalita Hakkugala Samiti-Karnataka (Karnataka Rajya Samiti).

### Funding

No funding was received for conducting this study.

### Conflict of interest

The authors have no conflicts of interest to declare that they are relevant to the content of this article.

### About the License

© The author(s) 2021. The text of this article is open access and licensed under a Creative Commons Attribution 4.0 International License

### Cite this Article

Chendappa Rajappa Kambar aand Varun Gulati, Crises of Dalit Women in India, Indian Journal of Multilingual Research and Development, Vol 2, Iss 3 (2021) 13-23. DOI: https://doi.org/10.34256/ijmrd2132